



ಅಕ್ಟೋಬರ್ - 2011






# ಅಪರಂಜಿ



ತಿಳಿನಗೆಯ ಕಾರಂಜಿ

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ



ಸಂಪುಟ 29
ಸಂಚಿಕೆ - 1
ಅಕ್ಟೋಬರ್ - 2011

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮೂರ ದಸರಾ | **ಸಿ.ಆರ್. ಸತ್ಯ** | 4 |
| ಅದೃಷ್ಟ | **ಶಶಿಕಲಾ ರಾಜಾ** | 7 |
| ಜನ ಮರುಳೋ........! | **ಸುಕೇಶವ** | 13 |
| ಹೀಗೊಂದು ಆಪರೇಷನ್! | **ರಾಮಿ** | 16 |
| ಪವರ್ ಚ್ಯಾಟ್! | **ಇ.ಆರ್. ರಾಮಚಂದ್ರನ್** | 18 |
| ಮುಂಬರುವ ಫ್ಲೆಕ್ಸಿ ಬೋರ್ಡ್‌ಗಳು | | 20 |
| ಶ್ರೀ ಧವಳಗಿರಿ ಕ್ಷೇತ್ರ....... | **ಹರಿಕೃಷ್ಣ** | 22 |
| ಅಂತರಜಾಲ...... | **ನಾಗೇಶ್ ಹೆಗಡೆ** | 25 |
| ತುಂತುರು | **ದಂನಾಳ** | 28 |
| ಇಂದಿನ ಹಾಲು-ಜೇನು... | **ವಾಣೀ ಸುರೇಶ್** | 29 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 35 |
| ಸೇವಕರೇ ಮಾಲೀಕರಾದಾಗ | **ಆನಂದ** | 37 |
| ಮಾಸ ಭವಿಷ್ಯ | **ಸತ್ಯೋತ್ತಮಾಚಾರ್ಯ** | 39 |

**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



''ಕೆರೆ ಶುದ್ಧವಾಗಿರಲಿ, ಭಕ್ತಿ ಪವಿತ್ರವಾಗಿರಲಿ!'' – ಹೇಳಿಕೆ

● **ಇದನ್ನು ನಮ್ಮ ರಾಜಕಾರಣಿಗಳಿಗೆ ಹೇಳಬೇಕು !!**

★★★

ಕೆಲಸದ ಆಮಿಷ – ವಂಚಕನ ಸೆರೆ – ಸುದ್ದಿ

● **ಈಗ ಕಂಬಿ ಎಣಿಸುವ ಕೆಲಸ !!**

★★★

''ಶೀಘ್ರದಲ್ಲೇ ಯಡಿಯೂರಪ್ಪ ಮತ್ತೆ ಮುಖ್ಯ ಮಂತ್ರಿ'' – ಹೇಳಿಕೆ

● **ಗವಾಕ್ಷಿ ಬಹು ದೊಡ್ಡದಾಗಿರಬೇಕು !!**

★★★

ಕಾಯಿಲೆಯ ದೆಸೆಯಿಂದ ಕೋರ್ಟಿಗೆ ಬರಲಾರೆ ಎನ್ನುವ ರಾಜಕಾರಣಿಗಳು, ಆರೋಗ್ಯವಂತರಾಗಿದ್ದರೆ ಇನ್ನೆಷ್ಟು ಶ್ರೀಮಂತರಾಗುತ್ತಿದ್ದರೋ?!

★★★

ಹಿರಿಯಣ್ಣನ ಚಾಳಿ ಮನೆ ಮಕ್ಕಳಿಗೆಲ್ಲ ಬರಲಿ ಎಂದು ಅಪರಂಜಿ ಪ್ರಾರ್ಥಿಸುತ್ತಾಳೆ!!

★★★

ಜಿಲ್ಲಾ ನ್ಯಾಯಾಧೀಶರ ಪರೀಕ್ಷೆ; ಒಬ್ಬರೇ ಉತ್ತೀರ್ಣ – ಸುದ್ದಿ

● **''ಅನ್ಯಾಯ !!''**


★★★

ಬಸವಳಿದ ಜನ ಭುಗಿಲೆದ್ದರೆ, (ರಾಜಕೀಯ) ಕಸಕಡ್ಡಿಗಳ ಪಾಡ ನೋಡಾ! ಎನ್ನಬಹುದು ಈಗ!!

★★★



## *** ಹಾರ್ದಿಕ ಅಭಿನಂದನೆಗಳು ***



## ಡಾ|| ಚಂದ್ರಶೇಖರ ಕಂಬಾರ

ಕವಿ, ನಾಟಕಕಾರ, ಸಂಗೀತಗಾರ, ಗಾಯಕ, ಜಾನಪದ ವಿದ್ವಾಂಸ ಹಾಗೂ ಸರಳ ಸಜ್ಜನಿಕೆಯ ವ್ಯಕ್ತಿ ಡಾ|| ಚಂದ್ರಶೇಖರ ಕಂಬಾರ ಅವರಿಗೆ ಎಂಟನೆಯ ಜ್ಞಾನಪೀಠ ಪ್ರಶಸ್ತಿ ಬಂದಿದ್ದಕ್ಕಾಗಿ ಅಪರಂಜಿ ತನ್ನ ಎಲ್ಲ ಓದುಗರ ಹಾಗೂ ಅಭಿಮಾನಿಗಳ ಪರವಾಗಿ ಅಭಿನಂದನೆ ಸಲ್ಲಿಸುತ್ತಾಳೆ. ಕಂಬಾರರಿಗೆ ಬಂದ ಪ್ರಶಸ್ತಿಯೊಂದಿಗೆ ಮತ್ತೊಮ್ಮೆ ಕನ್ನಡ ಭಾಷೆ ಅತಿ ಹೆಚ್ಚಿನ ಜ್ಞಾನಪೀಠ ಪ್ರಶಸ್ತಿ ಪಡೆದ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಪರಂಜಿಯ ಓದುಗ ಅಭಿಮಾನಿಗಳಲ್ಲೊಬ್ಬರಾದ ಡಾ|| ಕಂಬಾರರು ಕೆಲವೇ ವರ್ಷಗಳ ಹಿಂದೆ ಅಪರಂಜಿ ಬೆಳ್ಳಿ ಹಬ್ಬದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅಪರಂಜಿಯ ಬಗೆಗೆ ಹಿತನುಡಿಗಳನ್ನು ಆಡಿದ್ದರು. ಅವರಿಗೆ ಸಂದ ಈ ಪ್ರಶಸ್ತಿಯೊಂದಿಗೆ ಅವರು ಸಾಹಿತ್ಯಲೋಕದಲ್ಲಿ ಇನ್ನೂ ಅನೇಕ ಸಾಧನೆಗಳನ್ನು ಮಾಡಿ ಕನ್ನಡ ನಾಡಿಗೆ, ಕನ್ನಡ ಭಾಷೆಗೆ ಇನ್ನಷ್ಟು ಮತ್ತಷ್ಟು ಗೌರವವನ್ನು ತರಲಿ ಎಂದು ನಮ್ಮೆಲ್ಲರ ಹಾರೈಕೆ.

(ಚಿತ್ರ : ಗುಜ್ಜಾರ್)

# ನಮ್ಮೂರ ದಸರಾ

**- ಸಿ.ಆರ್. ಸತ್ಯ**

**ಅ**ಲ್ಲ, ನಮ್ಮೂರು ಮೈಸೂರು ಅಲ್ಲ, ಭೂಸೂರು ನಮ್ಮ ಊರು; ಅಂದರೆ ಭೂಮಿಯನ್ನು ಸೂರೆಗೊಳ್ಳುವ ಊರು ಅಂತ ಒಳಾರ್ಥ. ಬಳ್ಳಾರಿ ಜಿಲ್ಲೆಯಲ್ಲಿದೆ. ಪಕ್ಕದಲ್ಲೆ ಬೆಟ್ಟ, ಚಾಮುಂಡಿ ಅಲ್ಲ, ಛೆ! ಛೆ!! ಲಂಚುಂಡಿ ಬೆಟ್ಟ ಅಂತಾರೆ. ತಾಯಿ ಲಂಚುಂಡೇಶ್ವರಿಯನ್ನು ಅಲ್ಲಿ ನಮ್ಮೂರಿನ ಹಿರಿಯರು ನೂರು ವರ್ಷದ ಹಿಂದೆ ಪ್ರತಿಷ್ಠಾಪನೆ ಮಾಡಿದರು. ಆಕೆಯ ಅನುಗ್ರಹ; ನಮ್ಮೂರಿನ ಹಿರಿಯರು ಕಿರಿಯರು ಎಲ್ಲಾ ಗಣಿಧಣಿಗಳೇ ಆಗಿದ್ದಾರೆ. ಎಲ್ಲೋ ನಮ್ಮಂತಹ ಕೆಲವು ಪ್ರಾಣಿಗಳು ಅಂತಹವರ ಲೆಕ್ಕಪುಸ್ತಕಗಳನ್ನು ''ಸರಿಯಾಗಿ'' ಇಡೋ ಕೆಲಸ ಮಾಡಿಕೊಂಡು ಸಂಬಳದ ಜೀವನ ನಡಿಸ್ತಿದೀವಿ ಅಷ್ಟೆ, ನಮ್ಮಂತಹ ಪೆಕ್ರಗಳಿಲ್ಲದೆ ಈ ಸಮಾಜ ಬದುಕುವುದಕ್ಕೆ ಸಾಧ್ಯವೆ?

ಲಂಚುಂಡೇಶ್ವರಿ ತಾಯಿಯಿಂದಾಗಿ ನಮ್ಮೂರಿನವರಿಗೆ ಲಂಚ ಕೊಡುವುದು, ಸ್ವೀಕರಿಸುವುದು ಎರಡೂ ಧಾರ್ಮಿಕ ನೀತಿ ನಿಯಮಗಳಾಗಿವೆ. ಇಲ್ಲಿ ಮಿಡಲ್ ಸ್ಕೂಲಿನಲ್ಲೇ ಮಕ್ಕಳಿಗೆ ಸೋಶಿಯಲ್ ಸ್ಟಡೀಸ್ ಅಂತಾರೆ ನೋಡಿ; ಆ ವಿಷಯದಲ್ಲಿ ಲಂಚದ ಬಗ್ಗೆ ಪಾಠಗಳನ್ನು ಹೇಳಿಕೊಡ್ತಾರೆ. ಲಂಚ ಎಂದರೇನು, ಯಾರು-ಯಾರಿಗೆ-ಯಾವಾಗ-ಎಷ್ಟು ಕೊಡಬೇಕು, ಕೊಟ್ಟ ಲಂಚದಿಂದ ಯಾರು ಏನನ್ನು ಎಷ್ಟು ಪಡೆಯಬೇಕು ಅಂತ ಮಕ್ಕಳು ಕಲಿತು ಹೈಸ್ಕೂಲಿನಲ್ಲೇ ಆ ವಿಷಯದಲ್ಲಿ 'ಪ್ರಾಜೆಕ್ಟ್ ವರ್ಕ್' ಮಾಡುತ್ವೆ, ಆ ಪ್ರಾಜೆಕ್ಟ್ ರಿಕಾರ್ಡ್‌ಗಳನ್ನು ಓದಿದರೆ ಎಷ್ಟು ಖುಶಿಯಾಗುತ್ತೆ ಅಂತೀರಿ, ಪೂರ್ತಿ ಓದದೇ ಇದ್ದರೂ ಅವುಗಳ ಶೀರ್ಷಿಕೆಗಳನ್ನೇ ನೋಡಿದರೆ ಸಾಕು: ''ಲಂಚ ಕೊಟ್ಟು ಜಾತಿ ಬದಲಾವಣೆ''; ''ಲಂಚದಿಂದ ಪಡೆದ ಮೋರಿ ಕಾಂಟ್ರಾಕ್ಟ್ - ಒಂದು ಸಮೀಕ್ಷೆ''; ''ಲಂಚದಿಂದ ಮಂತ್ರಿಯಾದ ನಮ್ಮ ಕೆಂಚ''; ''ಲಂಚದಿಂದ ಪಿಯೂಸಿ ಪಾಸು''; ''ಲಂಚದ ಮಹತ್ವ - ಒಂದು ಎಕರೆ ಗುತ್ತಿಗೆ, ಹತ್ತು ಎಕರೆ ಸ್ವಾಹ'' ಹೀಗೆ.

ಇದೇ ರೀತಿ ಈ ಮಕ್ಕಳು ಕಾಲೇಜು ಮೆಟ್ಟಲುಗಳನ್ನೇನಾದರೂ ಹತ್ತಿದರೆ, ಅಲ್ಲಿಯ ಐಚ್ಛಿಕ ವಿಷಯವಾಗಿ ಲಂಚದ ಬಗ್ಗೆ ಅಭ್ಯಸಿಸಿ ಕೆಲವರು ಡಾಕ್ಟರೇಟ್ ಪದವಿಗಳನ್ನೂ ಗಳಿಸಿದ್ದಾರೆ. ಭೂಸೂರಿನಿಂದ ಹೀಗೆ ಹೊರಬಂದ ನಮ್ಮ ಜನಾಂಗ, ಕರ್ನಾಟಕದ ಘನ ಸರ್ಕಾರದ ನಾನಾ ಇಲಾಖೆಗಳಲ್ಲಿ ದೊಡ್ಡ, ಚಿಕ್ಕಹುದ್ದೆಗಳಲ್ಲಿ ರಾರಾಜಿಸುತ್ತಿದ್ದಾರೆ ಹಾಗೂ ಜನ ಸೇವೆಯಲ್ಲಿ ನಿರತರಾಗಿದ್ದಾರೆ. ಇಂತಹವರ ಬಳಿ ನಮ್ಮ ಭೂಸೂರಿನ ಜನತೆಯೇ ಲಂಚ ಕೊಟ್ಟು ತಮಗೆ ಇಷ್ಟವಾದ ಕಾರ್ಯಗಳನ್ನು ಸಾಧಿಸಿಕೊಳ್ಳುವುದಲ್ಲದೇ, ನಮ್ಮೂರ ಹಿರಿಯ ಅಧಿಕಾರಿಗಳು ಕಾಡು, ನೆಲ, ಕೆರೆ, ಅದಿರು ಎಲ್ಲದರ ಮೇಲೂ ಸರ್ವಾಧಿಕಾರ ವಹಿಸಿಕೊಂಡು ನಮ್ಮ ರಾಜ್ಯದ ಮಂತ್ರಿವರ್ಗಕ್ಕೆ ಶೋಭಾಯಮಾನವಾಗಿದ್ದಾರೆ. ಭೂಸೂರಿನ ಬ್ಯಾಂಕ್‌ಗಳಲ್ಲಿ ಲಂಚದಿಂದ



ಬಂದ ಆದಾಯ ಹಣವನ್ನು ಇಡಲು ಲಾಕರ್ ಸೌಲಭ್ಯಗಳು ಕಮ್ಮಿ; ಹಾಗಾಗಿ ಸ್ವಿಡ್ಸರ್‌ಲೆಂಡ್, ಇಂಗ್ಲೆಂಡ್ ತರಹ ಹೊರ ದೇಶಗಳಲ್ಲೂ ನಮ್ಮ ಹಿರಿಯರು ಸಾವಿರಾರು ಕೋಟಿ ರೂಪಾಯಿಗಳನ್ನು ಜಮಾಯಿಸಿ ಇಟ್ಟಿದ್ದಾರೆ. ಈ ನೋಟಿನ ಕಂತೆಗಳನ್ನು ಎಣಿಸಿ ಕಟ್ಟುವುದೇ ನಮ್ಮಂತಹ ಸಂಬಳದವರ ಕೆಲಸ.

ಇಂತಹ ಶ್ರೀಮಂತರ ಊರಿನಲ್ಲಿ ದಸರಾ ಮಹೋತ್ಸವ ಹೇಗಿರುತ್ತೆ ಅಂತೀರೀ! ನೋಡೋಕ್ಕೆ ಎರಡು ಕಣ್ಣುಗಳೂ ಸಾಲದು! ಲಂಚುಂಡಿ ಬೆಟ್ಟಕ್ಕೆ ದೀಪಾಲಂಕಾರ ಮಾಡಿ ನವರಾತ್ರಿ ದಿನಗಳಲ್ಲಿ ಲಂಚುಂಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳಿಗೆ ವ್ಯವಸ್ಥೆ ಮಾಡ್ತಾರೆ. ಮೊದಲನೆ ದಿನ ಪಾಡ್ಯ - ನಮ್ಮ ಎಂ.ಎಲ್.ಎ. ದೇವಿಯ ಗರ್ಭಗುಡಿಯ ಮುಂದೆ ನಿಂತು ''ಅಮ್ಮಾ, ಲಂಚುಂಡೇಶ್ವರಿ, ಇಗೋ ನಿನಗೆ ಲಂಚ ಒಪ್ಪಿಸುತ್ತೇನೆ. ನಮಗೆ ನಿನ್ನ ದರ್ಶನದ ಅನುಗ್ರಹ ಕೊಡಮ್ಮ'' ಅಂತ ಲಂಚದ ಪ್ಯಾಕೆಟ್ (ಒಂದು ಲಕ್ಷ ರೂಪಾಯಿ ನಗದು) ಹೊಸಿಲ ಮೇಲೆ ಇಡ್ತಾರೆ, ತಕ್ಷಣ ಗರ್ಭಗುಡಿಯ ಬಾಗಿಲು ತೆರೆಯುತ್ತೆ, ಜನ ಹರ್ಷೋದ್ಗಾರ ಮಾಡ್ತಾರೆ. ಆದರೆ ಹೋದ ವರ್ಷ ಯಾಕೋ ಅರ್ಧ ಘಂಟೆಯಾದರೂ ಬಾಗಿಲು ತೆರೆಯಲೇ ಇಲ್ಲ. ಪೆಚ್ಚಾದ ಜನ ಇನ್ನೊಂದು ಸಲ ಪ್ಯಾಕೆಟ್‌ನಲ್ಲಿದ್ದ ದುಡ್ಡನ್ನು ಎಣಿಸಿದಾಗ, ಒಂದು ಲಕ್ಷಕ್ಕೆ ಹತ್ತು ಸಾವಿರ ಕಮ್ಮಿ ಇತ್ತು. ಆಕಸ್ಮಿಕವಾಗಿ ತಮ್ಮ ಜೇಬಿನಲ್ಲೇ ಉಳಿಸಿಕೊಂಡಿದ್ದ ಎಂ.ಎಲ್.ಎ. ಆ ಹತ್ತು ಸಾವಿರ ರೂಪಾಯಿಯನ್ನು ಹೊರತೆಗೆದ ತಕ್ಷಣ ಬಾಗಿಲು ದಿಢೀರ್ ಅಂತ ತೆಗೀತು! ಅಷ್ಟು ಶಕ್ತಿಯುತ ದೇವಿ ನಮ್ಮ ಲಂಚುಂಡೇಶ್ವರಿ.

ಸರಸ್ವತಿ ಪೂಜೆಯ ದಿನ ನಮ್ಮಂತಹ ಪೆಕ್ರಗಳಿಗೆ ಪೂಜೆ ಜವಾಬ್ದಾರಿ ಹೊರಸಿ, ಹಿರಿಯರೆಲ್ಲಾ 'ಲಕ್ಷ್ಮೀ' ಪೂಜೆಗೆ ಇಳೀತಾರೆ. ನೂರು, ಐನೂರು, ಸಾವಿರ ರೂಪಾಯಿ ನೋಟುಗಳಿಂದ ಹೊಲೆದಿರೋ ಪುಸ್ತಕಗಳನ್ನು ಲಂಚುಂಡೇಶ್ವರಿಯ ಪಾದಗಳಲಿಟ್ಟು ''ಅಮ್ಮಾ, ಜ್ಞಾನದಿಂದ ನಮಗೇನು ಉಪಯೋಗ? ಅದನ್ನು ನೀನೇ ಇಟ್ಟುಕೊಂಡು ನಮಗೆ ಧನವೃಷ್ಟಿ ಮಾತ್ರ ಕೊಡಮ್ಮ'' ಅಂತ ಬೇಡಿಕೊಳ್ಳುತ್ತಾರೆ. ಅವಳ ಕೃಪೆ; ಕೆಲವೊಮ್ಮೆ ಅವಳ ಬಲ ಭಾಗದಿಂದ ಪ್ರಸಾದ ರೂಪದಲ್ಲಿ ನೋಟುಗಳು ಉದುರುತ್ತವೆ.

ಅಷ್ಟಮಿ ದಿನ ನಮ್ಮ ಲಂಚುಂಡೇಶ್ವರಿಯ ರೂಪವಂತೂ ಅಸಮಾನ್ಯವಾಗಿರುತ್ತೆ. ವಜ್ರ ವೈಢೂರ್ಯಗಳಿಂದ ಶೋಭಿಸುತ್ತಾ, ದೇವಿ ತನ್ನ ಹತ್ತು ಕೈಗಳನ್ನೂ ಮುಂದಕ್ಕೆ ಚಾಚಿ ಲಂಚ ಸ್ವೀಕರಿಸುವ ಭಂಗಿಯಲ್ಲಿ ರಾರಾಜಿಸುತ್ತಾಳೆ. ನೂಕುನುಗ್ಗಲು ಇದ್ದರೂ, ಊರಿನ ಪ್ರತಿಯೊಬ್ಬ ಪ್ರಜೆಯೂ ಅವಳ ಕೈಗಳಿಗೆ ಹತ್ತೋ ನೂರೋ ರೂಪಾಯಿಗಳನ್ನು ಕೊಟ್ಟು ಆಶೀರ್ವಾದ ಪಡೆಯವುದು ಕಡ್ಡಾಯ ಹಾಗೂ ಮನಸ್ಸಿಗೆ ಸಮಾಧಾನಕರವಾದದ್ದು, ನವಮಿಯ ದಿವಸ ಮೈಸೂರಿನಲ್ಲಿ ಆಯುಧ ಪೂಜೆ ಮಾಡುವ ಹಾಗೆ - ನಮ್ಮೂರಿನಲ್ಲಿ ಕತ್ತಿ, ಚಾಕು, ಕಟಿಂಗ್ ಪ್ಲೇಯರ್‌ಗಳನ್ನು ಪೂಜಿಸಲ್ಲ, ನಾವು ಅಂತಹ ಮಂಕರಲ್ಲ, ಏನಿದ್ರೂ ಕ್ರೆಡಿಟ್ ಕಾರ್ಡ್, ಚೆಕ್‌ಬುಕ್, ಲ್ಯಾಪ್‌ಟಾಪ್, ನಕಲಿ ಐಡೆಂಟಿಟಿ ಕಾರ್ಡ್, ಬೇನಾಮಿ ಕಂಪವನಿಯ ವಾರ್ಷಿಕ ವರದಿಗಳು, ಪಾಸ್‌ಪೋರ್ಟ್‌ಗಳು, ಇಂತಹವುಗಳನ್ನೇ 'ಆಯುಧ'ಗಳಾಗಿ ಪೂಜಿಸ್ತೀವಿ, ಹಾಗೇನೇ ಮೈಸೂರಿನ ಕಡೆ ಇಡೋ ಬೊಂಬೆಗಳು ನಮ್ಮಲ್ಲಿ ಕಾಣಲ್ಲ, ಒಂದೇ ಒಂದು ಬಾರಿ

(ಹೋದ ವರ್ಷ) ಲೋಕಾಯುಕ್ತರನ್ನ ಊರಿನ ಹತ್ತು ಜನ ಅಟ್ಟಿಸಿಕೊಂಡು ಹೋಗುತ್ತಿರುವ ಹಾಗೆ ಬೊಂಬೆಗಳನ್ನು ಮಾಡಿ ದೇವಸ್ಥಾನದಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದರು, ಅಷ್ಟೆ

ಇನ್ನು ವಿಜಯದಶಮಿ ದಿನ ನಮ್ಮಲ್ಲಿ ನಡೆಯುವ ಮೆರವಣಿಗೆ ಕಣ್ಣಿಗೆ ಕಟ್ಟುವಂತಹುದು ಊರ ಬೀದಿಯಲ್ಲಿ ಸಾವಿರಾರು ಜನ ಜಮಾಯಿಸ್ತಾರೆ, ಎಲ್ಲೆಲ್ಲೂ ಹಬ್ಬದ ಮೋಜೇ ಮೋಜು. ನಮ್ಮ ಎಂ.ಎಲ್.ಎ. ಖುದ್ದಾಗಿ ಬೆಟ್ಟಹತ್ತಿ ಲಂಚುಂಡೇಶ್ವರಿಗೆ ಬೆಳಿಗ್ಗೆಯೇ ಪೂಜೆ ಸಲ್ಲಿಸುತ್ತಾರೆ. ನಂತರ ಕೆಳಗಿಳಿದು ಬಂದ ಸಜ್ಜಾಗಿರೋ ಮೆರವಣಿಗೆ ಮುಂದೆ ತಮ್ಮ ಮರ್ಸಿಡಿಸ್ ಕಾರಿನಲ್ಲಿ ಉಪಸ್ಥಿತರಾಗುತ್ತರೆ. ಅಕ್ಕ ಪಕ್ಕದಲ್ಲಿ ಊರಿನ ಬ್ಯಾಂಡ್ ಸೆಟ್ ಹಿಂದಿ ಹಾಡುಗಳನ್ನ ಬಾರಿಸುತ್ತೆ, ಹಿಂದೆ ಕಾರುಗಳು, ಲಾರಿಗಳು, ಟಾಬ್ಲೋಗಳು ಲೈನ್‌ನಲ್ಲಿ ಬರುತ್ವೆ. ಹೋದ ವರ್ಷದ ಟ್ಯಾಬ್ಲೋ ಒಂದರಲ್ಲಿ ನಮ್ಮ ಎಂ.ಎಲ್.ಎ. ಲಂಚ ಕೊಟ್ಟು 1 ರೂಪಾಯಿ ಗುತ್ತಿಗೆಗೆ ಜೋಗ್ ಜಲಪಾತಾನೇ ಪಡೆಯೋ ದೃಶ್ಯ ಎಷ್ಟು ಚೆನ್ನಾಗಿತ್ತೆಂದರೆ, ಕೇಂದ್ರ ಸರ್ಕಾರ ಆ ಟ್ಯಾಬ್ಲೋನ ರಿಪಬ್ಲಿಕ್ ಡೇ ಪೇರೇಡ್‌ಗೆ ದೆಹಲಿಗೂ ಕರೆಸಿಕೊಂಡಿತ್ತು. ಇನ್ನೊಂದು ಟಾಬ್ಲೋಲಿ ನಮ್ಮ ಮುಖ್ಯಮಂತ್ರಿಗಳು ನಮ್ಮ ಎಂ.ಎಲ್.ಎ.ಗೆ ಭೂಸ್ವಾಧೀನ (ಅಂದರೆ ನೂರು ವರ್ಷದ ಕಾಂಟ್ರಾಕ್ಟ್ ನೂರು ರೂಪಾಯಿಗೆ) ಕೊಡೋ ದೃಶ್ಯದಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಹಾಸನ ಜಿಲ್ಲೆಗಳನ್ನ ಧಾರೆ ಎರೆದು ಕೋಡೋ ದೃಶ್ಯವಂತೂ ಕಣ್ಣಲ್ಲಿ ನೀರು ಬರೋ ಹಾಗಿತ್ತು. ಇನ್ನೊಂದು ಸೋಜಿಗದ ದೃಶ್ಯವೆಂದರೆ ''ಮಂಚಕ್ಕೂ ಲಂಚ'' ಎಂಬ ಟಾಬ್ಲೋ ಖುದ್ದಾಗಿ ನಮ್ಮ ಊರಿನ ಜಿಲ್ಲಾ ಆಸ್ಪತ್ರೆಯಲ್ಲಿ ಮಂಚ ಅಲಾಟ್ ಮಾಡೋಕ್ಕೆ ಒಬ್ಬ ಬಡ ಪೇಶಂಟ್‌ನಿಂದ ಸಾವಿರ ರೂಪಾಯಿ ಲಂಚ ಪಡೆಯುತ್ತಿರೋ ಹಾಗೆ! ಜನರೆಲ್ಲಾ ನಕ್ಕಿದ್ದೂ ನಕ್ಕಿದ್ದೇ!

ಸರಿ ಊರಿನ ಮುಖ್ಯ ಬೀದಿಯಲ್ಲಿ ಮೆರವಣಿಗೆ ಮುಗಿದ ಮೇಲೆ ಬೆಂಜ್ ಕಾರಿನ ಸವಾರಿ ಲಂಚಮ್ಮನ ಕೆರೆ ದಡಕ್ಕೆ ಬರುತ್ತೆ. ಈಗ ಈ ಕೆರೆಯೂ ಇಲ್ಲ, ನೀರು ಇಲ್ಲ, ಲಂಚ ಕೊಟ್ಟು ಊರಿನವರು ಯಾರೋ ಕೆರೆ ಇದ್ದ ಜಾಗದಲ್ಲಿ ಫ್ಲಾಟ್ಸ್ ಕಟ್ಟಿಸ್ತಿದ್ದಾರೆ, ಹಾಗಾಗಿ ಮೆರವಣಿಗೆ ಅಲ್ಲಿಗೆ ಬಂದ ತಕ್ಷಣ ಫ್ಲಾಟ್‌ನವರೇ ಯಾರಾದರು ಒಬ್ಬರು ಒಂದು ಬಕೆಟ್ ನೀರನ್ನ ತಂದಿಡ್ತಾರೆ. ನಮ್ಮ ಎಂ.ಎಲ್.ಎ. ಕಾರಿನಿಂದ ಇಳಿದು, ಹಿಂದೆ ಡಿಕ್ಕಿಯಲ್ಲಿ ಇಟ್ಟಿದ್ದ ಲಂಚುಂಡೇಶ್ವರಿ ಅಮ್ಮನ ಉತ್ಸವ ಮೂರ್ತಿಯನ್ನು ಹೊರತೆಗೆದು, ಭಯ ಭಕ್ತಿ ಇಂದ ಅಭಿಷೇಕ ಮಾಡಿ ಮತ್ತೆ ಬೆಟ್ಟಕ್ಕೆ ಕರೆದೊಯ್ಯುತ್ತಾರೆ. ಆ ಮೇಲೆ ಅಲ್ಲಿ ತಾಯಿಯ ಗರ್ಭಗುಡಿ ಮುಂದೆ ಬೆಳಗಿನ ಜಾವದ ತನಕ ವಿಶೇಷ ಹರಿಕಥೆಯಾಗುತ್ತದೆ. ಈ ವರ್ಷ ಬಳ್ಳಾರಿಯಿಂದ ಯಾರೋ ಪ್ರಸಿದ್ಧ ಹರಿಕಥೆ ದಾಸರನ್ನ ಕರಿಸಿ ''ಲೋಕ ಸಂಹಾರ'' ಅಂತಲೋ ''ಲೋಕ ಯುಕ್ತ ಸಂಹಾರ'' ಎಂತಲೋ ಹೊಸ ಕಥೆ ಹೇಳಿಸ್ತಾರಂತೆ. ಹೇಗಿರುತ್ತೋ ಕೇಳಬೇಕು, ಸರಿ ಬೆಳಗಿನ ಹೊತ್ತಿನ ತನಕ ಪಟಾಕಿ ಹೊಡೆದು, ತೃಪ್ತಿಗಾಗಿ, ಜನರೆಲ್ಲಾ ಮುಂದಿನ ವರ್ಷದ 'ಧಾರ್ಮಿಕ' ಕಾರ್ಯಕ್ರಮಗಳಿಗೆ ಹೊಸ ಹುರುಪುನಿಂದ ಹೊರಡ್ತಾರೆ. ಹೀಗೆ ದಸರಾ ಮುಗಿಯುತ್ತೆ.

ಅಪರಂಜಿ ಓದುಗರೇ, ಬಿಡುವು ಮಾಡಿಕೊಂಡು ಈ ದಸರಾಗೆ ನಮ್ಮೂರಿಗೆ ಬನ್ನಿ, ನಿಮ್ಮಲ್ಲಿ ಯಾರಾದರೂ ಬುದ್ಧಿವಂತರಿದ್ದರೆ ಇಲ್ಲೆ ಸೆಟ್ಲ್ ಆಗೋದು ಗ್ಯಾರಂಟಿ! *



# ಅದೃಷ್ಟ

**ತಮಿಳು ಮೂಲ: ಶ್ರೀ ನಾಮಕ್ಕಲ್ ರಾಮಲಿಂಗಮ್ ಪಿಳ್ಳೈ**

**ಕನ್ನಡಕ್ಕೆ ಶ್ರೀಮತಿ ಶಶಿಕಲಾ (ರಾಮಲಿಂಗಂ) ರಾಜಾ**

*ಶ್ರೀ ನಾಮಕ್ಕಲ್ ರಾಮಲಿಂಗಮ್ ಪಿಳ್ಳೈ ಅವರು ತಮಿಳಿನ ಪ್ರಸಿದ್ಧ ಕವಿ ಮತ್ತು ಸ್ವಾತಂತ್ರ್ಯ ಹೋರಾಟಗಾರರು. ಅವರನ್ನು ರಾಷ್ಟ್ರಕವಿ ಎಂದು ತಮಿಳುನಾಡಿನ ಸರ್ಕಾರ ಪುರಸ್ಕರಿಸಿದೆ. ಶ್ರೀ ನಾಮಕ್ಕಲ್ ರಾಮಲಿಂಗಮ್ ಪಿಳ್ಳೈ ಅವರ ಆತ್ಮಕಥನವನ್ನು ತಮಿಳುನಾಡಿನ ಸರ್ಕಾರ ಮುದ್ರಿಸಿ ಕಡಿಮೆ ಬೆಲೆಗೆ ತಮಿಳು ಜನರಿಗೆ ಹಂಚಿತು ಹಾಗೂ ಕೇಂದ್ರ ಸರ್ಕಾರ 1989ರಲ್ಲಿ ನಾಮಕ್ಕಲ್ ಕವಿಜ್ಞರ್ ಅವರ ಅಂಚೆಚೀಟಿ ಹೊರತಂದಿತು. ಅವರ ಮತ್ತೊಂದು ಹವ್ಯಾಸವೆಂದರೆ ಚಿತ್ರ ಬರೆಯುವುದು. ಈ ಕುರಿತು ಅವರು ತಮ್ಮ ಆತ್ಮಕಥೆ ನನ್ನ ಕಥೆಯಲ್ಲಿ ಅದೃಷ್ಟ ಎಂಬುವ ಲೇಖನ ರಚಿಸಿದ್ದಾರೆ. ಅವರ ಆತ್ಮಕಥೆಯನ್ನು – ಎನ್‌ಕಥೈ – ಶ್ರೀಯುತರ ಕಿರಿಯ ಸೊಸೆ ಹಾಗೂ ಹಲವಾರು ಪ್ರಸಿದ್ಧ ತಮಿಳು ಕೃತಿಗಳನ್ನು ಈಗಾಗಲೇ ಅನುವಾದಿಸಿರುವ ಶ್ರೀಮತಿ ಶಶಿಕಲಾ (ರಾಮಲಿಂಗಂ) ರಾಜಾ ಅವರು ಕನ್ನಡೀಕರಿಸಿದ್ದು ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಅದರಿಂದ ಈ ಲೇಖನ ಆಯ್ದುಕೊಂಡಿದ್ದೇವೆ.*

**ಪಿ.**ಡಬ್ಲ್ಯೂ.ಡಿ.ಯಲ್ಲಿ ದೊಡ್ಡ ಎಂಜಿನಿಯರ್ ಆಗಿದ್ದ ಸಿಮ್‌ಸನ್ ಎನ್ನುವ ಆಂಗ್ಲೇಯರು ಕೆಲಸದ ಮೇಲೆ ನಾಮಕ್ಕಲ್ಲಿಗೆ ಮುಕ್ಕಾಮು ಬಂದು, ಮುಸಾಫಿರ್ ಬಂಗಲೆಯಲ್ಲಿ ತಂಗಿದ್ದರು. ಅವರು ಒಂದು ದಿನ ನಾಮಕ್ಕಲ್ಲಿನ ಟೌನ್‌ಹಾಲನ್ನು ಪ್ರವೇಶಿಸಿದರು. ನಾನು ರಚಿಸಿದ ಲಕ್ಷ್ಮಣ ಅಯ್ಯರ್ ಅವರ ಚಿತ್ರ ಅಲ್ಲಿತ್ತು. ಅದು ಅವರ ಕಣ್ಣನ್ನು ಸೆಳೆಯಿತು. ಬಳಿಗೆ ಹೋಗಿ ಚಿತ್ರವನ್ನು ನೋಡಿದರು. ಚಿತ್ರದ ಮೂಲೆಯಲ್ಲಿ ''ಕೈಯಿಂದ ರಚಿಸಲಾದ ಚಿತ್ರ'' ಎಂದು ಬರೆದಿರುವುದನ್ನು ಓದಿದರು. ''ಇದು ಕೈಯಲ್ಲಿ ಬರೆದ ಚಿತ್ರವೇ?'' ಎಂದು ಅಲ್ಲಿದ್ದವರನ್ನು ಕೇಳಿದರು. 'ಹೌದು' ಎಂದು ಉತ್ತರ ಬಂದಿತು. ''ಈ ಚಿತ್ರವನ್ನು ರಚಿಸಿದವರು ಯಾವ ಊರಿನವರು?'' ಎಂದು ಕೇಳಿದರು. ''ಇದೇ ಊರೇ'' ಎಂದು ಯಾರೋ ಉತ್ತರಿಸಿದರು. ಓವರ್ಸಿಯರನ್ನು ಕಳಿಸಿ ನನ್ನನ್ನು ಕರೆದುಕೊಂಡು ಬರಲು ಆದೇಶಿಸಿದರು. ಆ ದಿನ ನಾನು ಸಿಗಲಿಲ್ಲ. ಮರುದಿನ ಓವರ್ಸಿಯರು ನಮ್ಮ ಮನೆಗೆ ಬಂದು ಎಂಜಿನಿಯರ್ ದೊರೆ ನನ್ನನ್ನು ಕರೆಯುವುದಾಗಿ ತಿಳಿಸಿದರು. 'ದೊರೆ' ಎಂದೊಡನೆ ನನಗೆ ಆತಂಕ ಉಂಟಾಯಿತು. ಟೌನ್‌ಹಾಲಿನಲ್ಲಿ ಹಿಂದಿನ ದಿನ ನಡೆದದ್ದನ್ನೆಲ್ಲ ಓವರ್ಸಿಯರ್ ತಿಳಿಸಿದರು. ದೊರೆ ನನ್ನನ್ನು ಕಾಣಲು ಬಹಳ ಇಷ್ಟ ಪಡುವುದಾಗಿಯೂ, ಅದು ಏಕೆಂಬುದು

ತಮಗೆ ಗೊತ್ತಿಲ್ಲವೆಂದೂ ತಿಳಿಸಿದರು. ನಾನು ಉತ್ತರಿಸುವ ಮುನ್ನವೇ ನನ್ನ ತಂದೆ, ''ದೊಡ್ಡ ಎಂಜಿನಿಯರ್!'' ಅದೂ ದೊರೆ ಮಗಬೇರೆ. ನಿನ್ನನ್ನು ಕಾಣಲು ಇಷ್ಟ ಪಡುತ್ತಾರಂತೆ. ತಕ್ಷಣ ಹೊರಡು. ಅವರ ದಯವಿದ್ದರೆ ಒಳ್ಳೆಯ ಉದ್ಯೋಗ ದೊರೆತರೂ ದೊರೆಯಬಹುದು. 'ಇಚ್ಚಿಪೆಟ್ಟಿನ ವಾಡುಕು ಎಂಜಿನಿಯರ್ ಡಿಪಾರ್ಟ್‌ಮೆಂಟ್ ಎನ್ನುತ್ತಾರೆ' ಎಂದು ನನ್ನನ್ನು ಆತುರಪಡಿಸಿದರು. ನಾನೂ ಹೊರಟೆ. ದೊರೆಯನ್ನು ಕಾಣಲು ಹಾಗೇ ಹೋಗಬಹುದೇ? ಕಾಲರ್, ನೆಕ್ ಟೈ, ಹ್ಯಾಟು ಎಲ್ಲವನ್ನೂ ಧರಿಸಿ ಷೋಕಾಗಿ ಹೋದೆ ದೊರೆ ಮುಖ ಅರಳಿಸಿ, ನನ್ನ ಕೈ ಕುಲುಕಿ ಬರಮಾಡಿಕೊಂಡರು. ಕುರ್ಚಿಯೊಂದನ್ನು ತೋರಿಸಿ ಕುಳಿತುಕೊಳ್ಳಲು ಹೇಳಿದರು. ಅದಕ್ಕೆ ಮುಂಚೆ ನನಗೆ ಅಂಥ ಅನುಭವ ಆಗಿರಲಿಲ್ಲ. ದೊರೆ ಎಂದರೆ ದೂರದಲ್ಲಿ ಭಯಭಕ್ತಿಯಿಂದ ಮುದುರಿ ನಿಂತು ಸಲಾಮು ಹಾಕುವುದನ್ನು ಮಾತ್ರವೇ ನಾನು ಕಂಡಿದ್ದೆ. ದೊರೆ ''ನೀವು ಚಿತ್ರ ಕಲಾವಿದರೇ ಇಲ್ಲ ಫೋಟೋಗ್ರಾಫರ್ರೇ?'' ಎಂದು ಪ್ರಶ್ನಿಸಿದರು. ನಾನೊಬ್ಬ ಆರ್ಟಿಸ್ಟ್ ಎಂದು ಉತ್ತರಿಸಿದೆ. ಟೌನ್‌ಹಾಲಿನಲ್ಲಿ ತಾವು ನೋಡಿದ ಲಕ್ಷ್ಮಣ ಅಯ್ಯರ್ ಅವರ ಚಿತ್ರವನ್ನು ಯಾವ ಕಾಗದದ ಮೇಲೆ ರಚಿಸಲಾಗಿದೆ ಎಂದು ಕೇಳಿದರು. ನಾನು ತಕ್ಷಣ, ''ವಾಟ್ಮನ್ ಡಬಲ್ ಎಲಿಫೆಂಟ್ ರಫ್ ಪೇಪರಿನ ಮೇಲೆ ಕಪ್ಪು ಶಾಯಿಪುಡಿ ಮಾತ್ರ ಬಳಸಿ ರಚಿಸಲಾದ ಚಿತ್ರ'' ಎಂದು ಹೇಳಿದೆ. ಅವರು ಎಂಜಿನಿಯರ್ ಆಗಿದ್ದರಿಂದ, ಆ ಕಾಗದದ ಹೆಸರನ್ನೂ, ಶಾಯಿಪುಡಿಯಿಂದ ಚಿತ್ರ ಬರೆಯುವುದನ್ನೂ ಅರಿತವರು. ''ಹಾಗೇನು? ಆ ಚಿತ್ರದ ಫಿನಿಶ್ (ನಯ ಕೆಲಸ) ಬಹಳ ಚೆನ್ನಾಗಿದೆ'' ಎಂದು ನನ್ನನ್ನು ಮೆಚ್ಚಿ ಹೊಗಳಿ. ತಮ್ಮ ಕೈ ಪೆಟ್ಟಿಗೆಯನ್ನು ತೆರೆದು, ಅದರಿಂದ ಚಿಕ್ಕದೊಂದು ಫೋಟೋವೊಂದನ್ನು ಹೊರತೆಗೆದು ನನಗೆ ಕೊಟ್ಟರು. ಅದೊಂದು ಕೈ ಕ್ಯಾಮೆರಾದಿಂದ ತೆಗೆದ ಫೋಟೋ. ಸುಮಾರು ನಾಲ್ಕು ವರ್ಷದ ಮುದ್ದಾದ, ಮೃತ ಮಗುವೊಂದರ ಚಿತ್ರ. ಮಗುವನ್ನು ಜೀವಂತ ಶಿಶುವಿನಂತೆಯೇ ಕುರ್ಚಿಯಲ್ಲಿ ಕುಳ್ಳಿರಿಸಿ ತೆಗೆಯಲಾದ ಚಿತ್ರ. ದುಃಖ ತುಳುಕುವ ದನಿಯಲ್ಲಿ ದೊರೆ ಆ ಚಿತ್ರದ ಬಗ್ಗೆ ಹೇಳತೊಡಗಿದರು.

''ಇದು ನನಗಿದ್ದ ಒಬ್ಬಳೇ ಮಗಳ ಚಿತ್ರ. ಒಂಭತ್ತು ತಿಂಗಳ ಮುಂಚೆ ತಾನೇ ಅವಳೂ, ಅವಳ ತಾಯಿಯೂ ಸೀಮೆಯಿಂದ ಬಂದರು. ನಾಲ್ಕು ತಿಂಗಳ ಮುಂಚೆ ಮಗು ದಿಢೀರನೆ ಸತ್ತುಹೋಯಿತು. ಅವಳ ಚೆಲುವನ್ನು ಪೂರ್ತಿಯಾಗಿ ಬಿಂಬಿಸುವ ಚಿತ್ರ ಯಾವುದೂ ಇಲ್ಲ. ಚಿಕ್ಕ ವಯಸ್ಸಿನಲ್ಲಿ ಸೀಮೆಯಲ್ಲಿ ತೆಗೆದ ಚಿತ್ರಗಳಲ್ಲಿ ಯಾವುದೂ ಸಾಯುವ ಮುನ್ನ ಮಗುವಿಗಿದ್ದ ರೂಪ, ಬೆಳವಣಿಗೆಯನ್ನು ತೋರುವುದಿಲ್ಲ. ಮಗು ಸತ್ತುಹೋದ ಮೇಲೆ ತೆಗೆಯಲಾದ ಈ ಚಿತ್ರದಲ್ಲಿ ಅವೆಲ್ಲ ಸ್ಪಷ್ಟವಾಗಿ ಮೂಡಿವೆ. ಆದರೆ, ಆ ಮಗುವಿನ ಅಪೂರ್ವವಾದ ನಗು ಮತ್ತು ಜೀವಕಳೆ ಈ ಚಿತ್ರದಲ್ಲಿಲ್ಲ. ಇದನ್ನು ನಾಲ್ಕೈದು ಫೋಟೋಗ್ರಾಫರರಿಗೆ ಕೊಟ್ಟು ಮಗು ಕಣ್ಣು ತೆರೆದಿರುವಂತೆ ಎನ್ಲಾರ್ಜ್ ಮಾಡಲು ಹೇಳಿದೆ. ಒಂದಾದರೂ ಸರಿಯಾಗಿ ಬರಲಿಲ್ಲ. ನನಗೂ ಕೊಂಚ ಚಿತ್ರಕಲೆ ಗೊತ್ತಿದೆ. ಒಂದು ಎನ್ಲಾರ್ಜ್‌ಮೆಂಟಿನ ಮೇಲೆ ನಾನೇ ಕೈಯ್ಯಾಡಿಸಿ ನೋಡಿದೆ. ಪ್ರಯೋಜನವಿಲ್ಲ. ನಾನು ಹೇಳುವ ಗುರುತುಗಳನ್ನು ಮನದಲ್ಲಿರಿಸಿಕೊಂಡು, ಕಣ್ಣುಗಳಲ್ಲಿ ಜೀವಕಳೆಯನ್ನೂ, ತುಟಿಗಳಲ್ಲಿ ಆ ಅಪೂರ್ವವಾದ ಮುಗುಳ್ನಗೆಯನ್ನೂ ತರಿಸಲು ಯಾರಾದರೂ ಚಿತ್ರ ಕಲಾವಿದ



ಪ್ರಯತ್ನಿಸಿದರೆ ಮಾತ್ರ ಸಾಧ್ಯವೆಂದು ನಾನು ಯೋಚಿಸುತ್ತಲೇ ಇದ್ದೆ. ನಿನ್ನೆ ನೀವು ಬರೆದ ಚಿತ್ರವನ್ನು ನೋಡಿದ ಮೇಲೆ, ನಿಮ್ಮಿಂದ ನನ್ನ ಕೋರಿಕೆಯನ್ನು ಈಡೇರಿಸಲು ಸಾಧ್ಯವಾದರೂ ಆಗಬಹುದೆಂದು ಭಾವಿಸಿದೆ. ಪ್ರಯತ್ನಿಸುವಿರಾ?'' ಎಂದು ಕೇಳಿಕೊಂಡರು. ನಾನು ಕಿಂಚಿತ್ತೂ ಹಿಂಜರಿಯದೆ ''ಮಾಡುತ್ತೇನೆ!'' ಎಂದು ಹೇಳಿದೆ. ''ತುಂಬಾ ವಂದನೆಗಳು'' ಎಂದು ಹೇಳಿ ದೊರೆ ಆ ಚಿತ್ರವನ್ನು ನನ್ನಿಂದ ತೆಗೆದುಕೊಂಡು ತಮ್ಮ ಕೈಯಲ್ಲಿರಿಸಿಕೊಂಡು. ಮಾಡಬೇಕಾದ ಮಾರ್ಪಾಟುಗಳನ್ನು ಮತ್ತೆ ಮತ್ತೆ ನನಗೆ ಪಾಠ ಹೇಳಿಕೊಡುವವರಂತೆ ಹೇಳಿದರು. ನಾನೂ ಅವುಗಳನ್ನೆಲ್ಲ ಚೆನ್ನಾಗಿ ಗಮನಿಸಿ ಕೇಳಿ ಮನನ ಮಾಡಿಕೊಂಡೆ. ಚಿತ್ರದ ಉದ್ದಗಲಗಳು 15, 12 ಅಂಗುಲ ಇದ್ದರೂ ಸಾಕು ಎಂದರು. ಎಲ್ಲವನ್ನೂ ಹೇಳಿ ಮುಗಿಸಿ. ''ಅದಕ್ಕೆ ಎಷ್ಟು ಚಾರ್ಜ್ ಆಗುತ್ತದೆ?'' ಎಂದು ಕೇಳಿದರು. ನನಗೆ ಅಲ್ಲಿಯವರೆಗೂ ಚಾರ್ಜ್ ಮಾಡಿದ ಅನುಭವವಿರಲಿಲ್ಲ. ಈ ಅಳತೆಯ ಚಿತ್ರಕ್ಕೆ ಬೇರೆ ಕಲಾವಿದರು ಎಷ್ಟು ಬೆಲೆ ಕೇಳಬಹುದೆಂಬುದನ್ನೂ ಕಿವಿಯಾರೆ ಕೇಳಿರಲಿಲ್ಲ. ನಾನು ಬೆಲೆ ಹೇಳಲಾಗದೆ, ಕಣ್ಣು ಕಣ್ಣು ಬಿಡುತ್ತಾ ನಿಂತೆ ದೊರೆ ಎರಡು ಮೂರು ಬಾರಿ ಕೇಳಿದರು. ನಾನು ಅದುವರೆಗೂ ಅಂಥ ಕೆಲಸ ಮಾಡಿಲ್ಲವೆಂದೂ, ನನ್ನ ಚಿತ್ರಕಲೆಯನ್ನು ಉದ್ಯೋಗದಂತೆ ಇನ್ನೂ ಆರಂಭಿಸಿಲ್ಲವೆಂದೂ ವಾಸ್ತವ ಸಂಗತಿಯನ್ನು ತಿಳಿಸಿ. ''ಚಿತ್ರ ಚೆನ್ನಾಗಿ ಬಂದರೆ, ತಾವು ಸಂತೋಷದಿಂದ ಏನನ್ನು ಕೊಟ್ಟರೂ ತೆಗೆದುಕೊಳ್ಳುತ್ತೇನೆ'' ಎಂದೆ. ಸಂತೋಷಕ್ಕಾಗಿ ಎಷ್ಟು ಬೇಕಾದರೂ ಕೊಡಬಹುದು. ಅದು ಆಮೇಲೆ. ಈಗ ಮಾಡುವ ಕೆಲಸಕ್ಕೆ ಒಂದು ಬೆಲೆಯನ್ನು ನಿರ್ದಿಷ್ಟಪಡಿಸಿಕೊಂಡರೆ ಒಳ್ಳೆಯದು. ಅದೇ ಒಳ್ಳೆಯ ಪದ್ಧತಿ. ನಾನು ಐವತ್ತು ರೂಪಾಯಿ ಕೊಡುತ್ತೇನೆ. ಸಾಕೇನು?'' ಎಂದು ದೊರೆ ಕೇಳಿದರು. ಐವತ್ತು ರೂಪಾಯಿ! ಅದು ನನಗೆ ಬಹಳ ದೊಡ್ಡ ಮೊತ್ತವಾಗಿಯೇ ತೋರಿತು. ತಾಲ್ಲೂಕು ಕಚೇರಿಯಲ್ಲಿ ಮೂರು ತಿಂಗಳು ಕೆಲಸ ಮಾಡಿದೆ. ಮೂರು ತಿಂಗಳಿಗೆ ಸೇರಿಸಿ ನಲವತ್ತೈದು ರೂಪಾಯಿ ಮಾತ್ರ ಸಂಬಳ (ಆಗ ಗುಮಾಸ್ತಗರಿಗೆ ತಿಂಗಳಿಗೆ ಹದಿನೈದು ರೂಪಾಯಿ) ದೊರೆತಿತ್ತು. ಉಪಾಧ್ಯಾಯ ವೃತ್ತಿಯಲ್ಲಿ ಪಡೆದದ್ದೂ ಅಷ್ಟು ಮಾತ್ರವೇ. ಅದುವರೆಗೆ ಬರೆದುಕೊಟ್ಟ ಚಿತ್ರಗಳಿಗೂ ಇಪ್ಪತ್ತು ರೂಪಾಯಿಗಿಂತ ಹೆಚ್ಚಾಗಿ ಯಾರೂ ಕೊಟ್ಟಿರಲಿಲ್ಲ. ಐವತ್ತು ರೂಪಾಯಿ ಒಳ್ಳೆಯ ಬೆಲೆಯೆಂದೇ ತಿಳಿದು ನಾನು ತಕ್ಷಣ ಒಪ್ಪಿಕೊಂಡೆ. ಚಿತ್ರವನ್ನು ಬರೆದು ಮುಗಿಸಲು ಇಪ್ಪತ್ತು ದಿನಗಳ ವಾಯಿದೆ ನೀಡಿ, ಅನಂತರ ಮತ್ತೆ ನಾಮಕ್ಕಲ್ಲಿಗೆ ಮುಕ್ಕಾಮು ಬರುವುದಾಗಿ ಹೇಳಿ, ''ಏನಾದರೂ ಅಡ್ವಾನ್ಸ್ ಬೇಕೆ?'' ದೊರೆ ಕೇಳಿದರು. ಬೇಡವೆಂದು ಹೇಳಿ, ಚಿತ್ರವನ್ನು ಮಾತ್ರ ಪಡೆದುಕೊಂಡು, ಅವರನ್ನೂ ಬೀಳ್ಕೊಂಡು ಮನೆಗೆ ಹಿಂದಿರುಗಿದೆ. ಅವರಿಗೆ ಆಶ್ಚರ್ಯವಾಗಿರಬಹುದು.

ಹಿರಿಯ ಎಂಜಿನಿಯರ್ ದೊರೆಯೊಡನೆ ಮಾತನಾಡಲೆಂದು ಹೋಗಿದ್ದ ನನ್ನನ್ನು ನನ್ನ ತಂದೆ ನಿರೀಕ್ಷಿಸುತ್ತಿದ್ದರು. ನಾನು ಎಲ್ಲವನ್ನೂ ವಿವರವಾಗಿ ತಿಳಿಸಿದೆ. ''ಈ ಐವತ್ತು ರೂಪಾಯಿ ಎಷ್ಟು ದಿನ ಬಂದೀತು? ದೊರೆಯ ಬಳಿ ಯಾವುದಾದರೂ ಕೆಲಸ ಕೇಳಬೇಕಾಗಿತ್ತು'' ನನ್ನ ತಂದೆ ಹೇಳಿದರು. ನಾನು ಮುಖವನ್ನು ಚಿಕ್ಕದು ಮಾಡಿಕೊಂಡು ಏನನ್ನೋ ಗೊಣಗಿದೆ, ನನ್ನ ತಂದೆ ಜಿಗುಪ್ಸೆಯಿಂದ ''ಸರಿ... ಮುದುಕನ ಮಾತಿಗೆ ಮೂರು ಕಾಸಿನ ಬೆಲೆಯೂ ಇಲ್ಲ...

ಏನೇ ಇದ್ದರೂ ಇದೆಲ್ಲ ಒಂದು ಸರ್ಕಾರಿ ಕೆಲಸಕ್ಕೆ ಸಮನಾಗುತ್ತದೆಯೇ? ಮಾತನಾಡದೆ ಮೂವತ್ತು ದಿನ ಎಣಿಸಿ, ಸಂಬಳ ತೆಗೆದುಕೊಂಡು ಶಿವನೇ ಎಂದು ನೆಮ್ಮದಿಯಾಗಿ ಇರಬಹುದಾದ ಕೆಲಸವನ್ನು ಬೇಡವೆಂದು ಬಿಟ್ಟು ಬಂದು.... ಸರಿ.... ಚಿತ್ರವನ್ನಾದರೂ ಗಮನವಿಟ್ಟು ಬರಿ ಹೋಗು!'' ಎಂದರು. ನಾನು ನನ್ನ ಕೋಣೆಗೆ ಹೋದೆ. ಸ್ವಲ್ಪ ಹೊತ್ತಿಗೆ ನನ್ನ ತಂದೆ ಕೈಯಲ್ಲೊಂದು ಪಂಚಾಂಗ ಹಿಡಿದು ನನ್ನ ಕೋಣೆಗೆ ಬಂದರು. ಅವರಿಗೆ ದಿನ ನಕ್ಷತ್ರಗಳಲ್ಲಿ ಬಹಳ ನಂಬಿಕೆ. ರಾಹುಕಾಲ, ಗುಳಿಕಕಾಲ ನೋಡದೆ ಯಾವ ಕೆಲಸಕ್ಕೂ ತೊಡಗುತ್ತಿರಲಿಲ್ಲ. ''ಚಿತ್ರ ಬರೆಯುವುದನ್ನೂ ಆರಂಭಿಸಲು ಮುಂದಿನ ಶುಕ್ರವಾರ ಒಳ್ಳೆಯ ದಿನ. ಪೂರ್ವಫಾಲ್ಗುಣ ನಕ್ಷತ್ರ. ಯಾವಾಗಲೂ ಚಿತ್ರ ಬರೆಯುವುದನ್ನು ಪೂರ್ವಫಾಲ್ಗುಣ ನಕ್ಷತ್ರದಲ್ಲಿಯೇ ಆರಂಭಿಸು. ಗೊತ್ತಾಯಿತಾ?'' ಎಂದರು. ನಾನೂ ಸಮ್ಮತಿಸಿದೆ. ನಕ್ಷತ್ರಗಳ ಬಗ್ಗೆ ನನಗೆ ನಂಬಿಕೆಯಿಲ್ಲವಾದರೂ, ನನ್ನ ತಂದೆಯವರ ತೃಪ್ತಿಗಾಗಿ ಅವರು ಹೇಳಿದ ಸಮಯದಲ್ಲಿ ಚಿತ್ರ ಬರೆಯಲು ಆರಂಭಿಸಿದೆ. ಅನಂತರ ನಾನು ಬರೆದ ಎಲ್ಲ ಚಿತ್ರಗಳನ್ನೂ ನನ್ನ ತಂದೆಯವರ ನೆನಪಿಗಾಗಿ ಪೂರ್ವಫಾಲ್ಗುಣ ನಕ್ಷತ್ರದಲ್ಲಿಯೇ ಆರಂಭಿಸಿದೆ. ಎಲ್ಲರೂ ಹಾಗೆಯೇ ಮಾಡಬೇಕೆಂದು ನಾನು ಹೇಳಲಿಲ್ಲ. ನಾನು ಹಾಗೆ ಮಾಡಿದೆ ಅಷ್ಟೆ.

ನನ್ನೆಲ್ಲ ಚಿತ್ರಕಲಾ ಪರಿಣತಿಯನ್ನೂ ಒಗ್ಗೂಡಿಸಿ. ದೊರೆಯಿಂದ ಒಳ್ಳೆಯ ಹೆಸರು ಪಡೆಯಬೇಕೆಂಬ ಉದ್ದೇಶದಿಂದ, ಬಹಳ ಮುತುವರ್ಜಿಯಿಂದ ಕೆಲಸದಲ್ಲಿ ತೊಡಗಿದೆ. ದೊರೆ ಮಾಡುವಂತೆ ಹೇಳಿದ ಮಾರ್ಪಾಟುಗಳನ್ನೆಲ್ಲ ಮತ್ತೆ ಮತ್ತೆ ನೆನೆಯುತ್ತಾ, ಸುಮಾರು ಹತ್ತು ದಿನಗಳಲ್ಲಿ ಚಿತ್ರವನ್ನು ಮುಗಿಸಿಬಿಟ್ಟೆ. ಮುಂದೆ ಒಂದು ವಾರವಿಡೀ ಪದೇ ಪದೇ ಅದನ್ನು ಸರಿಪಡಿಸುತ್ತಾ, ಆಗಾಗ ತೋರಿದ ಚಿಕ್ಕಪುಟ್ಟ ಮಾರ್ಪಾಟುಗಳನ್ನು ನನ್ನ ಮನಸ್ಸಿಗೊಪ್ಪುವಂತೆ ಮಾಡುತ್ತಲೇ ಇದ್ದೆ. ಇನ್ನು ಮುಂದೆ ಬೇರೆ ಯಾವ ಮಾರ್ಪಾಟನ್ನೂ ಮಾಡಬಾರದೆಂದೂ ತೋರಿದ ಮೇಲೆ, ಚಿತ್ರವನ್ನು ಒಪ್ಪಂದದಂತೆ ಉತ್ತಮ ದರ್ಜೆಯ ರಟ್ಟಿಗೆ ಅಂಟಿಸಿ, ಹುಳು ಹಿಡಿಯದಂತೆ ಭದ್ರಪಡಿಸಿ, ದೊರೆಯ ಆಗಮನವನ್ನು ನಿರೀಕ್ಷಿಸುತ್ತಾ ಕಾಲ ಕಳೆದೆ.

ದೊರೆ ಹೇಳಿದ ದಿನದಂದು ಸಂಜೆ ಐದೂವರೆಗೆ ಓವರ್ಸಿಯರ್ ಬಂದು, ದೊರೆ ಬಂದಿದ್ದಾರೆಂದೂ, ಚಿತ್ರದೊಡನೆ ನನ್ನನ್ನು ಬರಹೇಳಿದರೆಂದೂ ಕರೆದರು. ನಾನು ಕೂಡಲೇ ನನ್ನ ಉಡುಪನ್ನು ಬದಲಿಸಿ, ಚಿತ್ರವನ್ನು ಎರಡು ರಟ್ಟುಗಳ ನಡುವೆ ಇರಿಸಿ ಕಟ್ಟಿ, ತೆಗೆದುಕೊಂಡು ಬಂಗಲೆಗೆ ಹೋದೆ. ದೊರೆ ನಮ್ಮನ್ನು ನಿರೀಕ್ಷಿಸುತ್ತಾ ವರಾಂಡದಲ್ಲಿ ಈಸಿಚೇರೊಂದರಲ್ಲಿ ಒರಗಿ ಮಲಗಿದ್ದರು. ಮೊದಲಿನಂತೆಯೇ ಎದ್ದು ಕೈಕುಲುಕಿ ನನ್ನನ್ನು ಬರಮಾಡಿಕೊಂಡರು. ಚಿತ್ರವನ್ನು ಪಡೆದುಕೊಂಡು, ಅದನ್ನು ಒಳಗಿರಿಸಿ ಬಂದು, ಓವರ್ಸಿಯರ್‌ಗೆ ಉದ್ಯೋಗಸಂಬಂಧವಾಗಿ ಯಾವುದೇ ಕೆಲಸವೊಂದನ್ನು ತುರ್ತಾಗಿ ಮಾಡಲು ಹೇಳಿದರು. ಓವರ್ಸಿಯರ್ ಹೋಗಿಬಿಟ್ಟರು. ನನ್ನನ್ನು ಕುಳಿತುಕೊಳ್ಳುವಂತೆ ಹೇಳಿ, ದೀಪ ಹಚ್ಚುವಂತೆ ದೊರೆ ಆದೇಶಿಸಿದರು.

ದೀಪವೂ ಬಂದಿತು. ದೊರೆ ಒಳಗೆ ಹೋದರು. ನಾನೂ ಅವರನ್ನು ಹಿಂಬಾಲಿಸಿದೆ. ದೊರೆ ಕಟ್ಟುಗಳನ್ನು ಬಿಚ್ಚಿ, ಚಿತ್ರವನ್ನು ತೆಗೆದು ಮೇಜಿನ ಮೇಲಿರಿಸಿದರು. ಸನಿಹದಲ್ಲಿ ನಿಂತು ಎರಡು ಮೂರು ನಿಮಿಷಗಳವರೆಗೆ ಚಿತ್ರವನ್ನು ನೋಡುತ್ತ ನಿಂತರು. ಮುಂದೆ ಹೋಗಿ



ನೋಡಿದರು. ಹಿಂದೆ ಬಂದು ನೋಡಿದರು. ಬೆಳಕನ್ನು ಮತ್ತೊಂದು ಕಡೆ ಇರಿಸಿ ನೋಡಿದರು. ಕೋಣೆಯನ್ನು ಬಿಟ್ಟು ಹೊರಗೆ ಹೋಗಿ ದೂರದಿಂದ ನೋಡಿದರು. ಮತ್ತೆ ಒಳಗೆ ಬಂದು ಚಿತ್ರದ ಹತ್ತಿರ ಹೋಗಿ, ಮೇಲೆ ಸೂರನ್ನು ನೋಡುತ್ತಾ ಏನನ್ನೋ ಆಲೋಚಿಸಿದರು. ಸುಮಾರು ಹದಿನೈದು ನಿಮಿಷ ಹೀಗೆಲ್ಲ ನೋಡುತ್ತಲೇ ಇದ್ದರು. ನನ್ನೊಡನೆ ಏನನ್ನೂ ಮಾತನಾಡಲಿಲ್ಲ. ಮುಖದಲ್ಲೂ ಸಂತೋಷದ ಲಕ್ಷಣವೇನೂ ಕಾಣಿಸಲಿಲ್ಲ. ಕಣ್ಣನ್ನೂ, ಮುಖವನ್ನೂ ಅವರು ಪದೇಪದೇ ಕಿರಿದಾಗಿಸಿದಾಗಲೆಲ್ಲ, ಅದು ಅತೃಪ್ತಿಯಿಂದಲೇ ಇರಬೇಕೆಂದು ನನಗೆ ತೋರಿತು. 'ಚಿತ್ರ ಸರಿಯಾಗಿ ಬರಲಿಲ್ಲವೆಂದು ಕಾಣುತ್ತದೆ' ಎಂಬ ದಿಗಿಲು ನನಗುಂಟಾಯಿತು. ನನ್ನ ಆಸೆಗಳೆಲ್ಲವೂ ಮರೆಯಾಗತೊಡಗಿದವು. ನಾನು ಹಾಕಿದ ಯೋಜನೆಗಳೆಲ್ಲ ಬುಡಮೇಲಾದುವೇನೋ ಎಂದು ತೋರಿತು. ಮನಸ್ಸಿನಲ್ಲಿ ನಾನು ಕಟ್ಟಿದ ಕೋಟೆ ಉರುಳಿ ಬಿದ್ದಂತೆನಿಸಿತು.

ದೊರೆ ಚಿತ್ರವನ್ನು ನೋಡುತ್ತಲೇ ಮೆಲ್ಲನೆ ನಡೆದು ನನ್ನ ಸನಿಹಕ್ಕೆ ಬಂದರು. ನನ್ನ ಎಡ ತೋಳಿನ ಮೇಲೆ ತಮ್ಮ ಬಲ ಹಸ್ತವನ್ನಿರಿಸಿ ನಿಂತು, ನನ್ನೊಡನೆ ಏನನ್ನೂ ಮಾತನಾಡದೆ, ಕೊಂಚಕಾಲ ಚಿತ್ರವನ್ನೇ ನೋಡುತ್ತ ನಿಂತರು. ಆಗ ಅವರ ಮುಖದಲ್ಲಿ ವ್ಯಸನವೇ ಕಾಣಿಸಿತು. ಕಿಂಚಿತ್ತಾದರೂ ಸಂತಸ ಕಾಣಿಸಲಿಲ್ಲ... ನನ್ನದೆಯಲ್ಲಿ ಅವಲಕ್ಕಿ ಕುಟ್ಟಿದಂತಾಯಿತು. ಉಸಿರಾಟವೇ ನಿಂತಂತಾಗಿ, ಏದುಸಿರು ಬಿಡುವಂತಾಗಿ ಕಷ್ಟವಾಯಿತು....

ಮರು ನಿಮಿಷ ದೊರೆ ನನ್ನೆರಡು ತೋಳುಗಳನ್ನೂ ಹಿಡಿದು ಮೆಲ್ಲನೆ ಕುಲುಕಿ. ನನ್ನ ಮುಖವನ್ನು ನೇರವಾಗಿ ನೋಡುತ್ತಾ, ''ನೀವು ಅತಿಶಯವಾದ ಗೆಲುವು ಸಾಧಿಸಿಬಿಟ್ಟಿರಿ. ನನ್ನ ಮಗುವನ್ನು ಇಲ್ಲಿ ನೋಡುತ್ತಿದ್ದೇನೆ. ಆ ಕೊಂಕು ಮುಗುಳ್ನಗೆಯನ್ನು ಹಾಗೆಯೇ ಮೂಡಿಸಿದ್ದೀರಿ. ಕಣ್ಣುಗಳಲ್ಲಿ ಜೀವಕಳೆ ಜ್ವಲಿಸುತ್ತಿದೆ. ಚಿತ್ರವನ್ನು ನೋಡುತ್ತಿದ್ದರೆ ದುಃಖ ಉಕ್ಕುಕ್ಕಿ ಬರುತ್ತಿದೆ.... ನಾನು ನಿಮ್ಮನ್ನು ಬಹಳ ಶ್ಲಾಘಿಸುತ್ತೇನೆ. ನೀವಿನ್ನೂ ಚಿಕ್ಕವರು. ನಿಮ್ಮ ಭವಿಷ್ಯ ಬಹಳ ಚೆನ್ನಾಗಿರಲೆಂದು ಹಾರೈಸುತ್ತೇನೆ. ನಿಮಗೆ ಶುಭವನ್ನು ಕೋರುತ್ತೇನೆ'' ಎಂದು ನನ್ನನ್ನು ಕುರ್ಚಿಯೊಂದರಲ್ಲಿ ಕುಳ್ಳಿರಿಸಿ. ತಾವೂ ಮತ್ತೊಂದು ಕುರ್ಚಿಯಲ್ಲಿ ಕುಳಿತು. ಚಿತ್ರವನ್ನು ನೋಡಿ ಆನಂದಿಸಿದರು.


ದಿಢೀರನೆ ಮೇಲೆದ್ದು, ''ಓ! ನಿಮಗೆ ಹಣ ಕೊಡುವುದನ್ನೇ ಮರೆತುಬಿಟ್ಟೆ'' ಎಂದು ತಮ್ಮ ಕೈಪೆಟ್ಟಿಗೆಯನ್ನು ತೆರೆದು, ದೊಡ್ಡದೊಂದು ಮನಿಪರ್ಸನ್ನು ತೆಗೆದರು. ''ನಿಮ್ಮ ಕೆಲಸಕ್ಕೆ ಐವತ್ತು ರೂಪಾಯಿ ಸಾಲದು. ಹೆಚ್ಚು ಹಣ ನೀಡಲು ಆಶಿಸುತ್ತೇನೆ'' ಎನ್ನುತ್ತಾ ಮನಿಪರ್ಸಿನಿಂದ ನೋಟಿನ ಕಂತೆಯೊಂದನ್ನು ಹೊರತೆಗೆದು ನನ್ನ ಕೈಯಲ್ಲಿರಿಸಿ, ಮತ್ತೆ ಚಿತ್ರದ ಬಳಿಗೆ ಹೋಗಿ ಬಿಟ್ಟರು.

ಎಷ್ಟು ಹಣವನ್ನು ಹೆಚ್ಚಾಗಿ ಕೊಟ್ಟಿದ್ದಾರೋ ಎಂಬುದನ್ನು ತಕ್ಷಣ ಅರಿಯುವ ಆತುರದಿಂದ ನೋಟುಗಳನ್ನು ಎಣಿಸಿ ನೋಡಿದೆ. ಆ ಕಂತೆಯ ಮೇಲುಗಡೆ ಹತ್ತು ರೂಪಾಯಿ ನೋಟುಗಳೇ ಕಾಣಿಸಿದವು. ನೋಡಿದರೆ ಕಂತೆಯ ಮಧ್ಯೆ ಕೆಲವು ನೂರು ರೂಪಾಯಿ ನೋಟುಗಳೂ ಇದ್ದವು. ನನ್ನ ಕಣ್ಣುಗಳನ್ನೇ ನಂಬಲಾಗದೆ ಮತ್ತೆ ಮತ್ತೆ ನೋಡಿದೆ. ಒಳಗೆ

ನಿಜವಾಗಿ ನೂರು ರೂಪಾಯಿ ನೋಟುಗಳೇ ಇದ್ದವು. ಎಣಿಸಿ ನೋಡಿದೆ. ಹದಿನೇಳು ಹತ್ತು ರೂಪಾಯಿ ನೋಟುಗಳು, ಒಂದು ಐದು ರೂಪಾಯಿ ನೋಟು, ಐದು ನೂರು ರೂಪಾಯಿ ನೋಟುಗಳೂ ಇದ್ದವು. ಎಲ್ಲವೂ ಸೇರಿ ಆರು ನೂರಾ ಎಪ್ಪತ್ತೈದು ರೂಪಾಯಿ! ಅಬ್ಬಬ್ಬಾ! ಅಷ್ಟು ಹಣವೂ ನನ್ನದೇ? ಐವತ್ತು ರೂಪಾಯಿ ಕೊಡಬೇಕಾದ ಕೆಲಸಕ್ಕೆ ಎಷ್ಟು ಸಂತೋಷ ಬಂದರೆ ತಾನೇ ಯಾರಾದರೂ ಆರು ನೂರಾ ಇಪ್ಪತ್ತೈದು ರೂಪಾಯಿ ಹೆಚ್ಚಿಗೆ ಕೊಡುತ್ತಾರೆಯೇ? ಅದುವರೆಗೂ ಅಷ್ಟು ಹಣವನ್ನು ಮುಟ್ಟಿಯೂ ನೋಡಿರದ ನನಗೆ ದಿಗ್ಭ್ರಮೆಯೂ, ದಿಗಿಲೂ ಉಂಟಾದವು, ದೊರೆ ನನ್ನನ್ನು ಪರೀಕ್ಷಿಸುತ್ತಿದ್ದಾರೆಂದೇ ಭಾವಿಸಿದೆ. ಹಣವನ್ನು ಹಾಗೆಯೇ ಜೇಬಿನಲ್ಲಿರಿಸಿಕೊಳ್ಳುವ ಆಸೆಯುಂಟಾಯಿತು. ಆ ಆಸೆಯನ್ನು ಅರಿವೋ, ಭಯವೋ ತಡೆಯಿತು. ವಿವರಿಸಲಾಗದ ಏನೇನೋ ಭಾವನೆಗಳು ನನ್ನ ಮನಸ್ಸಿನಲ್ಲಿ ಮೂಡಿ, ಕೊನೆಗೆ ಜೇಬಿನಲ್ಲಿರಿಸಿಕೊಳ್ಳುವ ಧೈರ್ಯವಾಗದೆ, ಆ ನೋಟುಗಳನ್ನು ಮೊದಲಿನಂತೆಯೇ ಮಡಿಸಿ, ಎದುರಿಗಿದ್ದ ಕುರ್ಚಿಯ ಮೇಲಿರಿಸಿ, ದೊರೆಯನ್ನು ನೋಡಿದೆ. ಅವರು ನನ್ನನ್ನು ಗಮನಿಸದೆ, ಚಿತ್ರವನ್ನೇ ನೋಡುತ್ತಿದ್ದರು. ಸ್ವಲ್ಪ ಹೊತ್ತಿನನಂತರ ತಿರುಗಿ ನೋಡಿ, ''ತೃಪ್ತಿಯಾಯಿತು ತಾನೇ?'' ಎಂದು ಕೇಳಿದರು. ನಾನು ಉತ್ತರಿಸದೆ ನೋವಿನ ನಗೆ ಬೀರಿ ಎದ್ದು ನಿಂತೆ. ನನಗೆ ತೃಪ್ತಿಯಾಗಿಲ್ಲವೆಂದು ಭಾವಿಸಿ, ಅವರು ನನ್ನ ಸನಿಹಕ್ಕೆ ಬಂದರು. ನೋಟುಗಳು ನನ್ನ ಕೈಯಲ್ಲಿರದೆ, ಎದುರಿಗಿದ್ದ ಕುರ್ಚಿಯ ಮೇಲಿರುವುದನ್ನು ಕಂಡರು.

*

ತಿರುಪತಿ ತಿಮ್ಮಪ್ಪನಿಗೆ ನೀಡಿದ ಕಿರೀಟ ಹಿಂದಿರುಗಿಸಲಾಗದು... -- ಸುದ್ದಿ






# ಜನ ಮರುಳೋ............!

**- ಸುಕೇಶವ**

## ಜನ ಹೀಗೂ ಇರ್ತಾರೆ

ಪಾರ್ಟಿಯೊಂದರಲ್ಲಿ ಇಬ್ಬರು ರಾಜಕಾರಿಣಿಗಳು ಕೈಯಲ್ಲಿ ಗ್ಲಾಸ್ ಹಿಡಿದು ಆನಂದಿಸುತ್ತಿದ್ದರು. ಒಂದೊಂದು ಸಾರಿ ನಾವು ಎಲ್ಲಿ ಇದೀವಿ ಅನ್ನೋದೆ ಮರೆತುಹೋಗುತ್ತೆ ಅಂತ ಒಬ್ಬ ಅಂದಿದ್ದಕ್ಕೆ, ಇನ್ನೊಬ್ಬ ಗಾಬರಿಯಿಂದ ಅಯ್ಯಯ್ಯೋ ಪಾರ್ಟಿ ಅಧ್ಯಕ್ಷರು ಇವತ್ತು ನನ್ನ ಮನೆಗೆ ಬರ್ತಿನಿ ಅಂದಿದ್ರು, ಅವರು ಬಂದಾಗ ನಾನು ಮನೇಲಿ ಇರದೇ ತಪ್ಪಿಸಿಕೊಳ್ಳಬೇಕು ಅಂದುಕೊಂಡಿದ್ದೆ. ಇನ್ನೇನು ಅವರು ಬರೋ ಹೊತ್ತು ನಾನು ಮನೆಗೆ ಹೋಗಿ ನಾನು ಮನೇಲಿ ಇದೀನಾ ಇಲ್ವಾ ಅಂತ ನೋಡ್ಕೊಂಡು ಬರ್ತೀನಿ ಅಂತ ಓಡಿದ. ಅರ್ಜೆಂಟಾಗಿ ಅವನ ಡ್ರೈವರನ್ನ ಮನೆಗೆ ನಡಿ ಅಂದು ಕಾರಿನಲ್ಲಿ ಕೂತ. ಮನೆಗೆ ಹೋದೊಡನೆ ಹೊರಗೆ ನಿಂತು ಕಾಲಿಂಗ್ ಬೆಲ್ ಒತ್ತಿ ನಿಂತ. ಐದು ನಿಮಿಷ ಆದ ಮೇಲೆ ಸಮಾಧಾನದಿಂದ ಸಧ್ಯ ನಾನು ಮನೇಲಿ ಇಲ್ಲ. ಈಗ ಬೇಕಾದರೆ ಪಾರ್ಟಿ ಅಧ್ಯಕ್ಷರು ಬಂದು ಹೋಗಲಿ ಅಂದುಕೊಂಡು ಬಂದು ಪುನ: ಕಾರಿನಲ್ಲಿ ಕೂತ. ಡ್ರೈವರು ಯಾಕ್ಸಾರ್ ಮನೆಗೆ ಬಂದಿದ್ರಿ ಅಂತ ಕೇಳಿದಾಗ ರಾಜಕಾರಿಣಿ ವಿವರಿಸಿದ. ಅದಕ್ಕೆ ಡ್ರೈವರು, ಸರ್ ಮನೇಲಿ ಕರೆಂಟ್ ಇತ್ತೋ ಇಲ್ವೋ ನೋಡಿದ್ರಾ, ಯಾಕೇಂದ್ರೆ ನೀವು ಕಾಲಿಂಗ್ ಬೆಲ್ ಬಾರಿಸಿದ್ದು ಒಳಗೆ ನೀವು ಇದ್ರೂ ಅದು ನಿಮಗೆ ಕೇಳಬೇಕಲ್ಲ ಅಂದಿದ್ದಕ್ಕೆ ರಾಜಕಾರಿಣಿ ಮತ್ತೆ ಗೊಂದಲದಲ್ಲಿ ಬಿದ್ದ. ಈಗೇನು ಮಾಡೋದು ಅಂತ ಅವನು ಡ್ರೈವರನ್ನೇ ಕೇಳಿದಾಗ ಡ್ರೈವರು ಸರ್, ಇಲ್ಲಿ ಪಬ್ಲಿಕ್ ಫೋನಿದೆ ಇಲ್ಲಿಂದ ಫೋನ್ ಮಾಡಿ. ನೀವು ಮನೇಲಿ ಇದ್ರೆ ಫೋನ್ ತಗೋತೀರ, ಫೋನ್ ಸುಮ್ನೆ ರಿಂಗ್ ಆಗ್ತಾ ಇದ್ರೆ ನೀವು ಮನೇಲಿ ಇಲ್ಲ ಅಂತ ಅಂದ. ರಾಜಕಾರಿಣಿಗೆ ಖುಷಿಯಾಗಿ ಫೋನ್ ಮಾಡಿದ. ಮನೇಲಿ ಯಾರೂ ಇಲ್ಲದ್ದರಿಂದ ಸುಮ್ನೆ ರಿಂಗ್ ಆಗ್ತಾ ಇತ್ತು. ಮತ್ತೆ ಬಂದು ಕಾರಿನಲ್ಲಿ ಕೂತು ಖುಷಿಯಿಂದ, ಒಳ್ಳೆ ಸಲಹೆನೇ ಕೊಟ್ಟೆ ನಿನಗೂ ಬುದ್ಧಿ ಇದೆ. ನನ್ನ ಜೊತೆ ಕೆಲಸ ಮಾಡ್ತಾ ಮಾಡ್ತಾ ನೀನೂ ಚುರುಕಾಗ್ತಾ ಇದೀಯ. ಈಗ ವಾಪಸ್ ಪಾರ್ಟಿಗೆ ನಡಿ ಅಂದ. ಅದಕ್ಕೆ ಡ್ರೈವರು ಯಾವಾಗ್ಲೂ ಹಾಗೆ ಸಾರ್, ನಾವು ಮನೇಲಿ ಇದೀವಾ ಇಲ್ವಾ ಅಂತ ತಿಳ್ಕೊಳೋಕೇ ಮನೇಗೇ ಹೋಗಬೇಕಾಗಿಲ್ಲ ಸುಮ್ನೆ ಒಂದು ಫೋನ್ ಹಾಕಿದ್ರೆ ಸಾಕು ಅಂತ ನನಗೆ ಬಹಳ ದಿನಗಳ ಹಿಂದೆಯೇ ನನ್ನ ಸ್ನೇಹಿತ ಹೇಳಿದ್ದ ಸರ್, ಅವಾಗ್ಲಿಂದನೂ ನಾನೂ ಹೀಗೇ ಮಾಡ್ತಿನಿ ಅಂದ.

*****

## ಹೀಗೊಂದು ಆನಿವರ್ಸರಿ

ಆಫೀಸಿನಲ್ಲಿ ಇದ್ದಕ್ಕಿದ್ದಂತೆ ಸೋಮು ಅಳೋಕೆ ಷುರು ಮಾಡಿದ. ಎಲ್ಲರಿಗೂ ಗಾಬರಿ. ಯಾರು ಏನು ಕೇಳಿದರೂ ಮಾತೇ ಆಡದೇ ಅಳ್ತಾನೇ ಇದ್ದಾಗ ರಂಗರಾಜು ಸೋಮು ಮನೆಗೆ ಫೋನ್

ಮಾಡಿ ಅವನ ಹೆಂಡ್ತಿಗೆ ವಿಷಯ ತಿಳಿಸಿದ. ಅದಕ್ಕೆ ಅವಳು ಕೂಡಾ ಜೋರಾಗಿ ಅಳ್ತಾನೇ ಉತ್ತರ ಕೊಟ್ಟು, ಅವರು ಯಾಕೆ ಅಳ್ತಾ ಇದಾರೆ ಅಂತ ನಂಗೊತ್ತು ಅವರನ್ನ ಹಾಗೆ ಮನೆಗೆ ಕರ್ಕೊಂಡು ಬನ್ನಿ ಅಂದು ಇನ್ನೂ ಜೋರಾಗಿ ಅತ್ತಳು. ಅದ್ಸರಿ ಮೇಡಂ ನೀವ್ಯಾಕೆ ಅಳ್ತಿದೀರ ಅಂತ ಕೇಳಿದರೆ ಸೋಮು ಯಾಕೆ ಅಳ್ತಾ ಇದಾರೋ ಅದಿಕ್ಕೆ ಅಂದಳು, ಸರಿ ಸೋಮು ಯಾಕೆ ಅಳ್ತಾ ಇದಾರೆ ಅಂದ್ರೆ ನಾನು ಯಾಕೆ ಅಳ್ತಾ ಇದೀನೋ ಅದಕ್ಕೆ ಅಂದಳು. ಅದ್ಸರಿ ನೀವಿಬ್ರೂ ಯಾಕೆ ಅಳ್ತಾ ಇದೀರ ಅದನ್ನಾದರೂ ಹೇಳಿ ಅಂದ್ರೆ ಸೋಮಿ ಅಳುತ್ತಲೇ ಫೋನ್ ಇಟ್ಟಳು. ರಂಗರಾಜು ಸೋಮುನ ಎಬ್ಬಿಸಿ ಮನೆಗೆ ಕರ್ಕೊಂಡು ಬಂದ. ದಾರಿಯುದ್ದಕ್ಕೂ ಸೋಮು ಅಳ್ತಾನೇ ಇದ್ದ. ಮನೇಲಿ ಸೋಮಿ ಇನ್ನೂ ಜೋರಾಗಿ ಅಳ್ತಾ ಇದ್ದಳು. ರಂಗರಾಜು ಫುಲ್ ಕನ್‌ಫ್ಯೂಸ್. ಇಬ್ಬರೂ ಒಬ್ಬರೆದುರಿಗೆ ಇನ್ನೊಬ್ಬರು ಕೂತು ಅಳೋದನ್ನ ರಂಗರಾಜುಗೆ ನೋಡೋಕೆ ಆಗಲಿಲ್ಲ. ರೀ ನೀವಿಬ್ರೂ ಯಾಕೆ ಅಳ್ತಾ ಇದೀರ ಅಂತ ಹೇಳಿಯಾದರೂ ಅತ್ತು ಸಾಯ್ರೀ ಅಂತ ರೇಗೇ ಬಿಟ್ಟ. ಸೋಮು ರಂಗರಾಜು ಹೆಗಲ ಮೇಲೆ ಕೈ ಹಾಕಿ ಹೋದ ವರ್ಷ ಇದೇ ದಿನ ಒಂದು ಆಘಾತವಾಗಿತ್ತು. ಅದನ್ನು ನೆನೆಸಿಕೊಂಡು ಅಳ್ತಾ ಇದೀನಿ ಅಂದ. ಸೋಮಿ ಕೂಡಾ ನನಗೂ ಹೋದ ವರ್ಷ ಇದೇ ದಿನ ನನ್ನ ಬದುಕಿನಲ್ಲಿ ಇನ್ನು ಯಾವತ್ತೂ ನಡೆಯದ ಆಘಾತವೊಂದು ನಡೆದುಹೋಯ್ತು. ಅದನ್ನು ನೆನೆಸಿಕೊಂಡೇ ಅಳ್ತಾ ಇದೀನಿ ಅಂದಳು. ಮತ್ತೆ ರಂಗರಾಜುಗೆ ಗೊಂದಲ. ಅದೇನು ಆಘಾತ ಆಯ್ತು ಅಂತನಾದ್ರೂ ಹೇಳ್ರೀ ಅಂದ. ಆಗ ಸೋಮು ಸೋಮಿ ಇಬ್ಬರೂ ಒಂದೇ ಧ್ವನಿಯಿಂದ ಹೇಳಿದರು. ಹೋದ ವರ್ಷ ಇದೇ ದಿನ ನಮ್ಮಿಬ್ಬರಿಗೂ ಮದುವೆಯಾಯಿತು.

*****

## ಹೀಗೊಂದು ಇನ್ಸ್‌ಪೆಕ್ಷನ್

ಅವತ್ತು ಆಫೀಸಿಗೆ ಇನ್ಸ್‌ಪೆಕ್ಷನ್‌ಗೆ ಬರ್ತಾರೆ ಅಂತ ಗೊತ್ತಿದ್ದೂ ಸಾಹೇಬರು ತಡವಾಗಿ ಬಂದರು. ಅವರ ಶಿಷ್ಯನೂ ತಡವಾಗಿ ಬಂದ. ಇನ್ಸ್ಟ್ಕರು ಹುಬ್ಬೇರಿಸಿ ನೋಡಿದಾಗ ಇಬ್ಬರೂ ತಲೆ ಕೆರ್ಕೊಂಡ್ರು. ಇಬ್ಬರನ್ನೂ ಛೇಂಬರಿಗೆ ಕರೆದು ಕಾರಣ ಕೇಳಿದರು. ಶಿಷ್ಯ ತಲೆ ಕೆರ್ಕೊಂಡು ಮನೆ ಕಡೆ ಸ್ವಲ್ಪ ಕೆಲಸ ಇತ್ತು ಅದಿಕ್ಕೆ ಅಂದ. ಏನಂಥ ಕೆಲಸ ಅಂದರು. ಅದೇ ಮನೆ ಎಲ್ಲ ಕ್ಲೀನ್ ಮಾಡಿ, ತಿಂಡಿ ಅಡಿಗೆ ಮಾಡಿಟ್ಟು, ಪಾತ್ರೆ ತೊಳೆದು ಹೆಂಡತಿಗೆ ತಿಂಡಿ ಕೊಟ್ಟು ಬರೋದು ಸ್ವಲ್ಪ ತಡ ಆಯ್ತು ಅಂದ. ನಾಚಿಕೆ ಆಗಲ್ವ ನಿನಗೆ, ಮನೇಲಿ ಹೆಂಗಸರು ಮಾಡೋ ಕೆಲಸವೆಲ್ಲ ನೀನು ಮಾಡೋಕೆ ಅಂದು ರೇಗಿದರು. ನಾನಲ್ಲ ಅಂದ ಶಿಷ್ಯ ಮತ್ಯಾರು ಅಂದರೆ ಸಾಹೇಬರ ಕಡೆ ಕೈ ತೋರಿಸಿದ. ಅವರು ಸಿಟ್ಟಾಗಿ ಏನ್ರೀ ಆಫೀಸಿನ ಸಿಬ್ಬಂದಿಯನ್ನ ನಿಮ್ಮನೆ ಕೆಲಸಕ್ಕೆ ಉಪಯೋಗ ಮಾಡ್ಕೊತಾ ಇದೀರಾ ಅಂತ ಕಣ್ಣು ಕೆಂಪು ಮಾಡಿದರು. ಸಾಹೇಬರು ಗಾಬರಿಯಿಂದ ಇಲ್ಲ ಸಾರ್ ನಾನು ಅಂಥಾ ಕೆಲಸ ಮಾಡಿಲ್ಲ ಅಂದರು. ಅವರು ಶಿಷ್ಯನ ಕಡೆ ಕಣ್ಣು ಕೆಂಪು ಮಾಡಿದರೆ ಶಿಷ್ಯ ಹೇಳಿದ, ಸರ್ ನಾನು ಹೇಳಿದ್ದು ಸಾಹೇಬರು ಅವರ ಮನೇಲಿ ತಿಂಡಿ ಅಡಿಗೆ ಮಾಡಿಟ್ಟು, ಪಾತ್ರೆ ತೊಳೆದು ಹೆಂಡತಿಗೆ ತಿಂಡಿ ಕೊಟ್ಟು ಬರೋಕೆ ಇಷ್ಟು ತಡ ಅಂದ. ಇನ್ಸ್‌ಪೆಕ್ಟರು ಗೊಂದಲದಲ್ಲಿ ಬಿದ್ದು ಸಿಟ್ಟು ನೆತ್ತಿಗೇರಿತು. ಇನ್ಸ್‌ಪೆಕ್ಟರು ಶಿಷ್ಯನ ಕಡೆ ನೋಡಿ ಅವರದ್ದಾಯ್ತು ನೀನ್ಯಾಕೆ ಲೇಟು ಅಂದ್ರು. ನಾನು ಸಾಹೇಬರನ್ನು ನನ್ನ ಸ್ಕೂಟರಿನಲ್ಲಿ ಕರ್ಕೊಂಡು ಬರಬೇಕಲ್ಲ ಅದಿಕ್ಕೆ ನಾನೂ ಲೇಟು ಅಂದ.

*****

## ಹೀಗೊಂದು ಚೌಕಾಶೀ ವ್ಯಾಪಾರ

ಮಾಲ್‌ಗೆ ಆತುರಾತುರವಾಗಿ ನುಗ್ಗಿದ ಗಿರಾಕಿ ರ್‍ಯಾಕ್ ಬಳಿ ಇದ್ದವನನ್ನು ಒಂದು ಕೆ.ಜಿ. ತೊಗರೀಬೇಳೆ ತಗೊಂಡ್ರೆ ಏನು ಫ್ರೀಯಾಗಿ ಕೊಡ್ತಿಯಾ ಅಂತ ಕೇಳಿದ. ಅದಕ್ಕೆ ಅವನು ನೀವು ಏನು ಕೇಳಿದ್ರೂ ಅಂದ. ಗಿರಾಕಿಗೆ ಆಶ್ಚರ್ಯವಾಯ್ತು. ಹಾಗಾದ್ರೆ ನನಗೆ ಒಂದು ಕೆಜಿ ತೊಗರಿಬೇಳೆ ಜೊತೆ ಒಂದು ಕೆಜಿ ಸಕ್ಕರೆ ಉಚಿತವಾಗಿ ಕೊಡು ಅಂದ. ಆಯ್ತು ತಗೊಳಿ ಅಂದ ಅವನು ಮುಂದುವರಿದು ನೀವು ಏನು ಬೇಕಾದರೂ ಕೊಂಡ್ಕೊಳಿ ಸಾರ್ ಅದಕ್ಕೆ ಏನು ಬೇಕಾದ್ರೂ ಫ್ರೀ ಕೇಳಿ ಪರವಾಗಿಲ್ಲ ಅಂದ. ಗಿರಾಕಿಗೆ ಆಶ್ಚರ್ಯವಾಯಿತು. ಎಲಾ ಇವನಾ ಇಂಥಾ ಸೇಲ್ಸ್ ಮೆನ್ ಇದ್ರೆ ಓನರ್‌ನ ಮುಳುಗಿಸಿಬಿಡ್ತಾನೆ ಅನಿಸಿತು. ಆದರೂ ಕುತೂಹಲ ಇವನು ಹೇಳ್ತಾ ಇರೋದು ನಿಜವೋ ಸುಳ್ಳೋ ಅಂತ. ಇನ್ನೊಮ್ಮೆ ಪರೀಕ್ಷೆ ಮಾಡೇ ಬಿಡೋಣ ಅಂತ. ನೋಡಪ್ಪ ಈಗ ನಾನು ಹತ್ತು ಕೆ.ಜಿ. ಸಕ್ಕರೆ ತಗೋತೀನಿ ಅದಕ್ಕೆ ಏನು ಫ್ರೀ ಕೊಡ್ತೀಯಾ ಅಂತ ಕೇಳಿದ. ಅದಕ್ಕೆ ಅವನು ಹೇಳಿದ್ನಲ್ಲ ಸರ್, ನೀವು ಕೇಳಿದ್ದು ಅಂತ ಅಂದ. ಅದಕ್ಕೆ ಗಿರಾಕಿ ಹಾಗಾದ್ರೆ ಒಂದು ಫ್ರಿಜ್ ಫ್ರೀ ಕೊಡ್ತೀಯಾ ಅಂತ ಕೇಳಿದ. ಅದಕ್ಕೆ ಅವ್ನು ಸರಿ ಯಾವ ಫ್ರಿಜ್ ಬೇಕೋ ತಗೋ ಹೋಗಿ ಅಂದ. ಗಿರಾಕಿಗೆ ಸಖತ್ ಆಶ್ಚರ್ಯ ಆಯ್ತು. ಅಲ್ಲಪ್ಪ ಇಂಥಾ ದುಬಾರಿ ವಸ್ತುಗಳನ್ನು ಫ್ರೀ ಕೊಡೋಕೆ ಹೇಗೆ ಸಾಧ್ಯ ನಿನಗೆ ಲಾಸ್ ಆಗಲ್ವಾ ಅಂತ ಕೇಳಿದ್ರೆ ಅವನು ನನಗ್ಯಾಕೆ ಲಾಸು, ಕೊಡೋನು ಅವನು ತಗೋಳೋರು ನೀವು ಅಂದ ಏನು ಹಾಗಂದ್ರೆ ಅಂದ್ರೆ, ನಾನು ಇಲ್ಲಿ ಸೇಲ್ಸ್‌ಮೆನ್ ಅಲ್ಲ ನಾನೂ ನಿಮ್ಮ ತರ ಗಿರಾಕೀನೇ, ನಾನು ನನ್ನ ಹೆಂಡ್ತಿಗೆ ಷಾಂಪೂ ತಗೊಂಡು ಹೋಗೋಕೆ ಬಂದಿದ್ದೆ ಅಂತ ಹೇಳಿ ಕಣ್ಣು ಹೊಡೆದು ನಕ್ಕು ಹೊರಟೇಹೋಗೋದೇ.

*

---

**ಲೇಖಕರಲ್ಲಿ ವಿನಂತಿ**

ದಯವಿಟ್ಟು ನಿಮ್ಮ ಲೇಖನಗಳನ್ನು ನುಡಿ ಅಥವಾ ಬರಹ ತತ್ರಾಂಶ ಬಳಸಿ ಕಳುಹಿಸಿ. ಹಸ್ತಪ್ರತಿಯನ್ನು ಸ್ವೀಕರಿಸುವುದು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ನಿಮ್ಮ ಸಹಕಾರಕ್ಕಾಗಿ ಧನ್ಯವಾದಗಳು.

# ಹೀಗೊಂದು ಆಪರೇಷನ್!

**- ರಾಮಿ**

**ಮೂ**ಡಲ ಹಳ್ಳಿಯ ಭೀಮಣ್ಣ ಆಚೆ ಬೀದಿಯ ತಮ್ಮ ಭಾವನ ಮನೆಗೆ ಬಂದವರು ನಮ್ಮಲ್ಲಿಗೆ ಬಂದೇ ಬರುತ್ತಿದ್ದರು. ಆದರೆ ಫೋನಾಯಿಸಿ ಬರುವುದು ಅವರ ಸಂಪ್ರಾದಾಯ ಅವತ್ತು ಏನಾಯಿತೋ, ಇದ್ದಕ್ಕಿದ್ದಂತೆ ಪ್ರತ್ಯಕ್ಷರಾಗಿಬಿಟ್ಟರು!

'ಬನ್ನಿ ಬನ್ನಿ', 'ಬಂದೇ ಬಿಟ್ಟೆನಲ್ಲ!' ಇತ್ಯಾದಿ ಮಾಮೂಲಿನ ಉದ್ಗಾರಗಳಾದ ಮೇಲೆ ಹಠಾತ್ತಾಗಿ ಉದಯವಾಗಿದ್ದರ ಕಾರಣವನ್ನು ಅವರಾಗಿಯೇ ತಿಳಿಸಿದರು ಭೀಮಣ್ಣ ತಂಗಿಯ ಮಗುವಿನ ನಾಮಕರಣವಂತೆ ಅದಕ್ಕಾಗಿ ಬಂದಿದ್ದರು.

'ಹೇಗೆ, ನಾಮಕರಣ ಗಡದ್ದಾಗಿತ್ತಾ?'

'ಗಡದ್ದಾಗಿಯೇ ನಡೆಯುವಂತೆ ಏರ್ಪಾಟಾಗಿತ್ತು. ಒಂದಲ್ಲ ಒಂದು ಕಡೆ ಭಾಷಣದ ಪ್ರೋಗ್ರಾಂ ಇರುತ್ತಲ್ಲ ಭಾವನಿಗೆ – ಅದಕ್ಕೂ ರಜಾ ಮಾಡಿದ್ದರು. ಆತನ ಪಾರ್ಟಿಯವರದು ಒಂದಲ್ಲ ಒಂದು ಕಡೆ ಜಾಥಾ, ಪ್ರತಿಭಟನೆ, ಹೋರಾಟ, ಉಪವಾಸ ಇತ್ಯಾದಿ ಪ್ರತಿನಿತ್ಯ ಎಂಬಂತೆ ಇರುತ್ತಲ್ಲ, ಭಾಷಣ ಬಿಗಿಯೋದಕ್ಕೆ, ಕಿಡಿ ಕಾರೋದಕ್ಕೆ, ಈತನೇ ಬೇಕು ಅವರಿಗೆ' ಗೊತ್ತು ಗೊತ್ತು!

ಆದರೆ ಇವತ್ತು ಹೋಗೋದಿಲ್ಲ ಅಂತಿದ್ದರು... 'ಮತ್ತೇನಾಯಿತು?'

'ನಾಮಕರಣ ಮಾತ್ರ ನಡೆಯಲಿಲ್ಲ, ಭಾವ ಅಭ್ಯಾಸ ಬಲದಿಂದ ಕಿಡಿಕಾರಿಯೇ ಕಾರಿದರು.'

'ಅರೆ, ಯಾರ ಮೇಲೆ?'

ಬೇರೆ ಯಾರ ಮೇಲೂ ಅಲ್ಲ ಹೆಂಡತಿ ಭಾಗ್ಯಳ ಮೇಲೇನೆ ಕಿಡಿ ಕಿಡಿ ಕಣ್ರೀ!

ಮಗುವಿನ ಹೆಸರಿಡುವ ವಿಷಯದಲ್ಲಿಯೇ ಇಬ್ಬರಿಗೂ ಕಾದಾಟಾ ಕಣ್ರೀ.... ಎಲ್ಲಾದರೂ ಇದೆಯಾ?

'ಛೆ ಛೆ!'

ಮಗುವಿಗೆ ಅಜ್ಜಿಯ – ಅಂದರೆ ನಮ್ಮ ತಾಯಿಯ ಹೆಸರಿಡಬೇಕೆಂದು ಇವಳ ಹಠ, 'ಸಾಧ್ಯವೇ ಇಲ್ಲ' ಎಂದು ಬಾವನ ಹಠ – ಬಹಳ ಸಮಯದಿಂದ ನಡೆದೇ ಇತ್ತಂತೆ'.

ಯಾವ ಹೆಸರು ಅದು?

'ಕಮಲ' ಅಂತ ನಮ್ಮ ತಾಯಿಯ ಹೆಸರು ಕಮಲ. ಈಗ ಅವರಿಲ್ಲ ಅವರ ಹೆಸರನ್ನೇ ಮೊಮ್ಮಗಳಿಗೆ ಇಡಬೇಕಂತ ಇವಳದು.

'ಅಯ್ಯೋ ಯಾತಕ್ಕೆ?' ಚೆನ್ನಾಗಿಯೇ ಇದೆಯಲ್ಲ 'ಕಮಲ' ಸೊಗಸಾದ ಹೆಸರು.



ನಮಗೆ ನಿಮಗೆ ಚೆನ್ನಾಗಿರಬಹುದು ಆದರೆ ಬಾವ ಒಪ್ಪಬೇಕಲ್ಲ, ಪ್ರತಿನಿತ್ಯ ಆಪರೇಷನ್ ಕಮಲದ ಮೇಲೆ ಕಿಡಿಕಾರುವ ಆತನಿಗೆ ಮಗಳನ್ನ 'ಕಮಲ' ಅಂತ ಕರೆಯೋದಕ್ಕೆ ಏನೇನೂ ಇಷ್ಟವಿಲ್ಲವಂತೆ ಆದ್ದರಿಂದ ಅದು ಕೂಡದು, ಎಷ್ಟಕ್ಕೂ ಕೂಡದು ಅಂತ ವರಾತ.

''ಆಗಲೇ ಆಗಮಿಸಿದ್ದ ಪುರೋಹಿತರೂ, ಕೆಲವರು ನೆಂಟರಿಷ್ಟರೂ ಎಷ್ಟೆಲ್ಲ ಸಮಜಾಯಿಷಿ ಹೇಳಿದರೂ ಕೇಳಲಿಲ್ಲ ನೋಡಿ, ಕೈಕೈ ಮಿಲಾಯಿಸುವ ಪರಿಸ್ಥಿತಿಯೂ ಬಂತು. ಎಷ್ಟೆಂದರೂ ರಾಜಕೀಯದವ ನೋಡಿ, ಷರ್ಟು ಹಾಕಿಕೊಂಡು ನಡೆದೇ ಬಿಟ್ಟ, ವಾಕ್ ಓಟ್ ರೋಗ ಗೊತ್ತಲ್ಲ.

'ಎಲ್ಲಿಗೆ?'

ಎಲ್ಲಿಗೆಂದು ಯಾರಿಗೆ ಗೊತ್ತು? ನಾವು ಕೆಲವರು ಹುಡುಕಿಕೊಂಡು ಹೊರಟೆವು. ಈ ದಾರಿಯಾಗಿಯೇ ಬಂದೆವು. ಒಂದು ನಿಮಿಷ ಹೊತ್ತು ಹೋಗೋಣ ಅಂತ ಬಂದೆ. ಕ್ಷಮಿಸಿ. ಆಮೇಲೆ ಸಿಗೊತ್ತೇನೆ ಪುಣ್ಯಾತ್ಮ ಭೀಮಣ್ಣ ನಡೆದೇ ಬಿಟ್ಟರು. 'ಇದೂ ಒಂದು ಆಪರೇಷನ್ ಕಮಲವೇ ಆಯಿತಲ್ಲ' ಎಂದು ತಲೆ ಚಚ್ಚಿಕೊಂಡ!

*

## ಮೂರು ಪ್ಲಸ್ ಒಂದು

ಒಂದು ಗಣಿತದ ತರಗತಿ. ಮಿಸ್. ಕೂಡುವ ಲೆಕ್ಕ ಮಾಡಿಸಿದ್ದರು. ಅದನ್ನು ಪರೀಕ್ಷಿಸಲು ಒಬ್ಬ ಹುಡುಗಿಯನ್ನು ಕರೆದು 'ನಿನ್ನ ಚೀಲಕ್ಕೆ ಈಗ ನಾನು ಮೂರು ಸೇಬು ಹಣ್ಣು ಹಾಕಿದರೆ ನಿನ್ನ ಚೀಲದಲ್ಲಿ ಎಷ್ಟು ಹಣ್ಣು ಇರುತ್ತದೆ?' ಎಂದು ಕೇಳಿದರು. 'ನಾಲ್ಕು' ಎಂದು ಮಗು ಉತ್ತರಿಸಿತು. ಮಗು ಜಾಣೆ. ಆದರೆ ಈ ಉತ್ತರ! ಮಿಸ್‌ಗೆ ಆಶ್ಚರ್ಯ. ಸರಿಯಾಗಿ ಹೇಳು ಎಂದರು. 'ನಾಲ್ಕು' ಎಂದಿತು ಮಗು ಮತ್ತೆ.

ಈಗ ಟೀಚರ್ 'ಮೂರು ಕಿತ್ತಲೆ ಹಣ್ಣು ಹಾಕಿದರೆ ನಿನ್ನ ಚೀಲದಲ್ಲಿ ಎಷ್ಟು ಕಿತ್ತಲೆ ಹಣ್ಣು ಇರುತ್ತದೆ?' ಎಂದು ಕೇಳಿದರು. 'ಮೂರು' ಎಂದಿತು ಮಗು. ಸದ್ಯ ಮಗುವಿಗೆ ಎಣಿಸಲು ಬರುತ್ತದೆ ಎಂದು ಸಮಾಧಾನ ಪಟ್ಟ ಮಿಸ್ 'ಸರಿ ಈಗ ಹೇಳು ನಿನ್ನ ಚೀಲದಲ್ಲಿ ಎಷ್ಟು ಸೇಬು ಇದೆ?' ಎಂದು ಕೇಳಿದಾಗ ಮಗು ಮತ್ತೆ 'ನಾಲ್ಕು' ಎಂದಿತು.

ಕೋಪಗೊಂಡ ಮಿಸ್ 'ನಾಲ್ಕು ನಾಲ್ಕು ಎಂದೇಕೆ ಹೇಳುವೆ? ನಾನು ಮೂರು ಸೇಬಷ್ಟೇ ಅಲ್ಲವೆ ಹಾಕಿದ್ದು?' ಎಂದು ಗದರಿಸಿದಾಗ ಮಗು 'ಇಲ್ಲ ಮಿಸ್ ನಮ್ಮಮ್ಮ ನನ್ನ ಚೀಲಕ್ಕೆ ಒಂದು ಸೇಬು ಹಾಕಿದ್ದರು ಶಾಲೆಗೆ ಹೋಗುವಾಗ' ಎಂದಿತು.

ಮಿಸ್ ಸುಸ್ತಾದರು.

# ಪವರ್ ಚ್ಯಾಟ್ !

– ಇ.ಆರ್. ರಾಮಚಂದ್ರನ್

ಇದೀಗ ಲೀಕ್ ಆಗಿರುವ

ಒಂದು ಘಹನವಾದ ಸಂಭಾಷಣೆ!

ಅವರಿಬ್ಬರೇ ಏಕಾಂತದಲ್ಲಿ ಕುಳಿತು ಮಾತನಾಡುತ್ತಿದ್ದರು.

'ನಿಮ್ಮ ಉಪವಾಸ ಸತ್ಯಾಗ್ರಹದಲ್ಲಿ ಎಷ್ಟು ಜನ ಕೂರುತ್ತಾರೆ?' ಅವರಲ್ಲಿ ಚಿಕ್ಕವ ಶುರು ಮಾಡಿದ.

'ನನಗೆ ಗೊತ್ತಿಲ್ಲ. ಸುಮಾರು ಇನ್ನೂರು, ಮುನ್ನೂರು ಮಂದಿ ಇರಬಹುದು,' ವಯಸ್ಸಾದವರ ಉತ್ತರ.

'ಹಗಲು ಸರಿ. ರಾತ್ರಿ ಕೂಡ ಉಪವಾಸಾನಾ?'

'ಇದು ಅನಿಶ್ಚಿತ ಕಾಲದ ಉಪವಾಸ ಅಂತ ಹೇಳಿದೆನಲ್ಲ.'

'ಹಾಗಾದರೆ ನಿಮಗೆ ರಾತ್ರಿಗೆ ಫ್ಲಡ್ ಲೈಟ್ ಬೇಕಾಗುತ್ತೆ. ನಾನು ಅದಕ್ಕೆ ಏರ್ಪಾಡು ಮಾಡ್ತೀನಿ. ಹಾಗೆ ಇ.ಸಿ.ಜಿ., ಬ್ಲಡ್ ಪ್ರೆಷರ್ ಚೆಕ್ ಮಾಡೋದಕ್ಕೆ ಮಷಿನ್ ತರಿಸ್ತೀನಿ.'

'ಅಯ್ಯೋ! ಅದೆಲ್ಲಾ ಯಾಕೆ? ನನ್ನ ಆರೋಗ್ಯ ಚೆನ್ನಾಗಿಯೇ ಇದೆ.'

'ನಿಮಗೆ ಗೊತ್ತಾಗಲ್ಲ! ಅದೂ ಮತ್ತು ಆಕ್ಸಿಜನ್ ಸಿಲಿಂಡರ್ ತರಿಸಿರ್ತೀನಿ. ಯಾವಾಗ ಬೇಕಾಗುತ್ತೋ ಏನೋ... ತಯಾರಾಗಿರೋದು ಒಳ್ಳೇದು ಯಾವಾಗಲೂ. ಆಮೇಲೆ ಎಷ್ಟು ಜನ ಬರಬಹುದು.'

'ಅಲ್ಲಿ ಕೆಪಾಸಿಟಿ 50,000 – 25,000 ಜನ ಬರಬಹುದು ಅನ್ಸುತ್ತೆ.'

'ನಿಮಗೆ ಕಾರು, ಬಸ್ಸುಗಳು ಬೇಕಾಗಬಹುದು.'

'ಬೇಡ. ಬರುವರೆಲ್ಲಾ ಅವರದೇ ವ್ಯವಸ್ಥೆ ಮಾಡಿಕೊಂಡು ಬರುತ್ತಾರೆ.'

'ಮಳೆಗಾಲದಲ್ಲಿ ಏನು ವ್ಯವಸ್ಥೆ ಮಾಡ್ಕೊಳ್ತಾರೆ? ನೀವೂ ಸರಿ... ಪಿಕಪ್ ಮತ್ತು ಡ್ರಾಪ್‌ಗೆ ವ್ಯವಸ್ಥೆ ನಾನು ಮಾಡ್ತೀನಿ. ಅಂದ ಹಾಗೆ.. ಮಳೆಗಾಲ.. ಛತ್ರಿ ಬೇಕಾಗುತ್ತೆ..'

'ಅಯ್ಯೋ! ಅವರೇ ತರ್ತಾರೆ ಬಿಡಿ...'

'ಮುಂಗಾರು ಮಳೆ.. ಯದ್ವಾ ತದ್ವಾ ಹೊಡೆಯುತ್ತೆ.. ದೊಡ್ಡ ಛತ್ರಿಗಳೇ ಬೇಕಾಗುತ್ತೆ. ಇಲ್ಲಿ ಅದೆಲ್ಲಾ ಸಿಗುವುದಿಲ್ಲ, ನಾನು ತರಿಸ್ತೀನಿ ಬಿಡಿ. ಮತ್ತೊಂದು ವಿಷಯ. ದೊಂಬಿ ಆಗಿ ನಿಮ್ಮ ಹತ್ತಿರ ಸುತ್ತಿಕೊಂಡು ತೊಂದರೆ ಕೊಡ್ತಾರೆ.'

'ಅದಕ್ಕೇನೂ ಮಾಡಕ್ಕಾಗಲ್ಲ... ತೊಂದರೆ ಏನು? ಅವರೆಲ್ಲಾ ನಮ್ಮ ಜನಗಳೇ ಅಲ್ವೇ?'



'ನೀವೂ ಸರಿ! ವಿಪರೀತ ದೊಂಬಿಯಾದರೆ ಕ್ರೌಡ್ ಕಂಟ್ರೋಲ್ ಮಾಡೋದು ಕಷ್ಟ ಅದಕ್ಕೇ ಒಂದು ಬ್ರಿಡ್ಜ್ ಹಾಕಿ ಬಿಡುವ.'

'ಬ್ರಿಡ್ಜಾ! ಯಾಕೆ ಅದೆಲ್ಲಾ?'

'ಬ್ರಿಡ್ಜಿದ್ದರೆ ಒಬ್ಬೊಬ್ಬರನ್ನಾಗಿ ನೀವಿರುವ ಜಾಗಕ್ಕೆ ಬಿಡಬಹುದು. ದೊಂಬಿ ಆಗೊಲ್ಲ.'

'ಅಕಸ್ಮಾತ್ ಬ್ರಿಡ್ಜ್ ಕುಸಿದು ಹೋದರೆ...?'

'ಒಂದು ಘಂಟೆಯೊಳಗೆ ಇನ್ನೊಂದು ಬ್ರಿಡ್ಜ್ ಎಬ್ಬಿಸ್ತೀನಿ. ಅದು ನನಗೆ ಬಿಡಿ. ಇನ್ನೇನು ಬೇಕಾಗುತ್ತೆ?'

'ಬೇರೆ ಏನೂ ಬೇಡಾಪ್ಪ.....'

'ಅಂದ ಹಾಗೆ ಮಧ್ಯಾಹ್ನ ಟೀ?'

'ನಾನು ತೊಟ್ಟು ನೀರು ಬಿಟ್ಟು ಏನೂ ತೊಗೋಳಲ್ಲ.'

'ಸರಿ ಮತ್ತೆ.. ನೀವು ರಾಮ್ ಲೀಲಾ ಮೈದಾನಕ್ಕೆ ಎಷ್ಟೊತ್ತಿಗೆ ಹೋಗ್ತೀರಿ?'

'ಹನ್ನೊಂದು ಘಂಟೆಗೆ... ರಾಜ್‌ಘಾಟ್‌ಗೆ ಹೋಗಿ ಅಲ್ಲಿಂದ ಸೀದ ರಾಮ್ ಲೀಲಾಗೆ.'

'ಅಣ್ಣಾ! ನಾನು ಇಲ್ಲಿಂದ ಹೊರಗಡೆ ಇರುವ ನನ್ನ ಕಾಂಟಾಕ್ಟ್‌ಗಳಿಗೆಲ್ಲಾ ಫೋನ್ ಮಾಡಿ ಎಲ್ಲಾ ಏರ್ಪಾಡು ಮಾಡ್ತೀನಿ. ಬ್ರಿಡ್ಜ್ ಎರಡು ಘಂಟೆಯೊಳಗೆ ಏಳುತ್ತೆ. ದೊಡ್ಡ ದೊಡ್ಡ ಛತ್ರಿಗಳು ಲಂಡನ್ನಿಂದ ನೇರವಾಗಿ ಪಾಲಂಗೆ ಫ್ಲೈಟ್ನಲ್ಲಿ ಬಂದು, ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ರಾಮ್ ಲೀಲಾಗೆ ಬರುತ್ತೆ. ಮೆಡಿಕಲ್ ಮೆಷೀನ್ಗಳು ಅಮೇರಿಕಾದಿಂದ ನೇರವಾಗಿ ದೆಹಲಿಗೆ ತರಿಸ್ತೀನಿ. ಅಲ್ಲಿಯ ತನಕ ಲೋಕಲ್ ಛತ್ರಿ ಲೋಕಲ್ ಮಷೀನ್‌ಗಳೇ ಉಪಯೋಗಿಸಬೇಕಾಗುತ್ತೆ ಒಂದೆರೆಡು ದಿವಸ. 500 ಟ್ಯಾಕ್ಸಿಗಳು, ಇನ್ನೋವ, ಸ್ಕಾರ್ಪಿಯೊ, ಕ್ವಾಲಿಸ್‌ಗಳು ಅರೇಂಜ್ ಮಾಡಿರ್ತೀನಿ.'

'ಅಯ್ಯೊ! ಏನೆಲ್ಲಾ ಮಾಡ್ತಾ ಇದ್ದೀಯಪ್ಪಾ ನೀನು..?'

'ರಾಮ್ ಲೀಲಾ ಮೈದಾನದ ನೆಲ ಡೊಂಕು ಡೊಂಕಾಗಿದೆ. ಮುನಿಸಿಪಾಲಿಟಿಯ ಒಂದು ಇನ್ನೂರು ಕರ್ಮಚಾರಿಗಳನ್ನು ರಾತ್ರೋ ರಾತ್ರಿ ಹಾಕಿ, ಜೆಸಿಬಿಯಿಂದ ನೆಲಸಮ ಮಾಡಿಸ್ಬಿಡ್ತೀನಿ. ಲೆಫ್ಟಿನೆಂಟ್ ಗವರ್ನರ್ ಮತ್ತು ಶೀಲಾಗೆ ಈಗಲೇ ಫೋನ್ ಮಾಡಿ ತಿಳಿಸ್ತೀನಿ. ನೀವು ನಾಳೆ ಮೈದಾನಕ್ಕೆ ಹೋಗುವ ಮುಂಚೆ ಎಲ್ಲಾ ರೆಡಿಯಾಗಿರುತ್ತೆ.'

'ಸುರೇಷ್ ಜಿ! ನಿಮಗೆ ಬಹಳ ಧನ್ಯವಾದ! ನನ್ನಿಂದ ಏನಾದರೂ ಸಹಾಯ ಮಾಡಬಹುದಾ? ಹೇಳಿ..'

'ಅಣ್ಣಾ! ನೀವು ನನ್ನನ್ನೂ ರಾಮ್ ಲೀಲಾಗೆ ಕರೆದುಕೊಂಡು ಹೋಗಿ. ಇಲ್ಲೇ ಇದ್ದು ಹುಚ್ಚು ಹಿಡಿಯುವ ಹಾಗೆ ಆಗಿದೆ. ತಿಹಾರ್ ಜೈಲಿನಿಂದ ನನ್ನನ್ನು ಹೇಗಾದರೂ ಬಿಡಿಸಿ!'

*

# ಮುಂಬರುವ ಫ್ಲೆಕ್ಸಿ ಬೋರ್ಡ್‌ಗಳು




**ಪರಿಕಲ್ಪನೆ: ಆನಂದ**

**ಕಲೆ: ಗುಜ್ಜಾರ್**

# ಶ್ರೀ ಧವಳಗಿರಿ ಕ್ಷೇತ್ರ ಪುರಾಣವು

**- ಹರಿಕೃಷ್ಣ**

**ಆ**ಸೇತು ಹಿಮಾಚಲಪರ್ಯಂತ ವಿಸ್ತಾರವಾಗಿ ಧರಣಿಮಂಡಲದಲ್ಲಿ ವ್ಯಾಪಿಸಿರುವ ಭರತಖಂಡದ ದಕ್ಷಿಣದಿಶೆಯಲ್ಲಿ ಪುಣ್ಯನದಿಗಳಾದ ಕಾವೇರಿ, ಕೃಷ್ಣೆ, ತುಂಗಭದ್ರಾದಿ ನದಿಗಳು ಹಾಗೂ ಸಹ್ಯಾದ್ರಿ ಗಿರಿಶ್ರೇಣಿಗಳಿಂದ ಕಂಗೊಳಿಸುತ್ತಾ ಮೆರೆವ ಕರ್ನಾಟಕ ರಾಜ್ಯದಲ್ಲಿ ದೇವಸಾಗರವೆಂಬೊಂದು ಜನಪದವುಂಟು. ಅಲ್ಲಿ ಧವಳಗಿರಿ ಎಂಬೊಂದು ಶ್ರೀಕ್ಷೇತ್ರವುಂಟು. ಬಟಾಬಯಲಾದ ಮಟ್ಟಸವಾದ ಪ್ರದೇಶದಲ್ಲಿರುವ ಆ ಪಾವನಕ್ಷೇತ್ರದ ಸುತ್ತಮುತ್ತಲೂ ಸನಿಹದಲ್ಲಿ ಸಣ್ಣದೊಂದು ಗುಡ್ಡವೂ ಇಲ್ಲದಿರಲು ಅದಕ್ಕೆ ಧವಳಗಿರಿ ಎಂಬ ನಾಮಧೇಯ ಬರಲು ಕಾರಣವೇನೆಂಬ ಕುತೂಹಲವು ಕೆಲ ಪುರಾತತ್ವ ಸಂಶೋಧಕರನ್ನು ಕಾಡಿದಾಗ ಅಂಥವರಲ್ಲಿ ಕೆಲ ಮಂದಿ ಈ ಬಗ್ಗೆ ಸಂಶೋಧನೆ ನಡೆಸಿದರು. ಆಗ ದಕ್ಕಿದ ಕೆಲವೇ ಕೆಲವು ದಾಖಲೆಗಳಿಂದ ತಿಳಿದುಬಂದ ಮಾಹಿತಿಯನ್ನು ಈ ಪಾಮರನು ಪುಣ್ಯಸ್ರೋತರಾದ ಜನತಾಜನಾರ್ಧನರ ಮುಂದೆ ಪ್ರಸ್ತುತಪಡಿಸಲು ಬಯಸಿ ತಮ್ಮ ಮುಂದಿಡುತ್ತಿರುವನು. ನದೀಮೂಲ ಹಾಗೂ ಋಷಿಮೂಲ ಹುಡುಕಿಕೊಂಡು ಹೋಗಬಾರದೆಂಬ ಅಲಿಖಿತ ನಿಯಮವಿದ್ದಾಗ್ಯೂ ಹೀಗೆ ಮಾಡಿದ ಜ್ಞಾನಾನ್ವೇಷಣೆಯ ತರಲೆ ಕಾರ್ಯವನ್ನು ಮುಗ್ಧ ವಾಚಕರು ಮನ್ನಿಸುವಿರೆಂದು ಸಣ್ಣದೊಂದು ವಿಶ್ವಾಸ ನನ್ನದು.

ದೇವಸಾಗರದ ದಿಡ್ಡಿಬಾಗಿಲು ಹಿಂದೊಮ್ಮೆ ಇದ್ದ ಸ್ಥಳದ ಬಳಿ ಸುಮಾರು ಮೂವತ್ತು ಮೂವತ್ತೈದು ವರ್ಷಗಳ ಹಿಂದೆ ಸನ್ಯಾಸಿಯೊಬ್ಬರು ಬಂದು ಹಾದಿಬದಿಯ ಸಾಲುಮರಗಳಲ್ಲೊಂದರಡಿಯಲ್ಲಿ ಬಸವಳಿದು ಮಲಗಿದ್ದರಂತೆ. ಆ ದಾರಿಯಲ್ಲಿ ಹೋಗಿಬರುವ ಕೆಲವು ಜನರು ಅವರನ್ನು ಕುತೂಹಲದಿಂದ ವಿಚಾರಿಸಿದಾಗ ತಿಳಿದಿದ್ದಷ್ಟು, ಗೊತ್ತುಗುರಿಯಿಲ್ಲದೆ ಊರೂರು ಅಲೆಯುತ್ತಾ ಸತತ ನಾಲ್ಕೈದು ದಿನಗಳಿಂದ ಕಿಸೆಯಲ್ಲಿ ಕಾಸಿಲ್ಲದೆ, ಹೊಟ್ಟೆಗೆ ಊಟವಿಲ್ಲದೇ ಅಲ್ಲಿ ಇಲ್ಲಿ ನಲ್ಲಿಗಳಿಂದ ಕೆರೆತೊರೆ ನದಿಗಳಿಂದ ನೀರು ಕುಡಿದು ನಿಭಾಯಿಸುತ್ತಾ ಕಾಲೆಳೆದುಕೊಂಡು ಸಾಗುತ್ತಿದ್ದರಂತೆ. ಮುಂದೆ ಕೆರೆಕೋಡಿಗಳಿಲ್ಲದ ಸ್ಥಳಗಳಲ್ಲಿ ನೀರು ಸಿಗದೆ ಸರ್ಕಾರಿ ಕೊಳವೆಬಾವಿಯಿಂದ ಪಂಪುಮಾಡಿ ನೀರು ಕುಡಿಯಲೆತ್ನಿಸಿ ಬರಿಯ ಗಾಳಿಯನ್ನೇ ಸೇದಿ ಈ ಜನಪದಕ್ಕೆ ಬರುವ ಹೊತ್ತಿಗೆ ಅವರ ಹೊಟ್ಟೆ ಬೆನ್ನಿನೊಂದಿಗೆ ಗುಪ್ತಸಮಾಲೋಚನೆ ಮಾಡುತ್ತಿರಲಾಗಿ ಮುಂದೆ ನಡೆಯಲಾರದೇ ಅಲ್ಲೇ ಕುಸಿದರಂತೆ.

ಇನ್ನು ಅಂತೆ ಕಂತೆಗಳನ್ನು ಬದಿಗಿಟ್ಟು ಮುಂದೆ ಸಾಗುತ್ತೇನೆ.

ಪೂರ್ವಜರ ಪುಣ್ಯಶೇಷ ಇನ್ನೂ ಉಳಿದಿರುವ ಪ್ರದೇಶ ದೇವಸಾಗರವಾದ್ದರಿಂದ ಸ್ವಭಾವತಃ ದಯಾಳುಗಳಾದ ಆ ಜನರು ಕನಿಕರಿಸಿ ಮನೆಯಿಂದ ಊಟ ತಂದು ಹಾಕಿದರು. ಆತನೋ ನಾಲ್ಕೈದು ದಿನಗಳಿಂದ ಮಾಡದೇ ಬಾಕಿಯಿದ್ದ ಊಟವನ್ನು ಅಂದರೆ ನಾಲ್ಕೈದು ಜನರ ಊಟವನ್ನು ಏಕಚಕ್ರನಗರಿಯಲ್ಲಿ ಆಶ್ರಿತನಾಗಿದ್ದ ಭೀಮನು ಬಕಾಸುರನ ಊಟವನ್ನು ಕಬಳಿಸಿದಂತೆ ಗಬಗಬನೆ ಉಣ್ಣುವ ಪರಿಯಂತೂ ಅತಿಥೇಯರ ಆತ್ಮವನ್ನು ಮುದಗೊಳಿಸಿತ್ತು.



ಊಟ ಮುಗಿಸಿ ಈ ಹಿಂದೆ ಕೊಳವೆಬಾವಿಯಿಂದ ಹೀರಿದ್ದ ಗಾಳಿಯನ್ನು ಢರ್ರೆಂದು ಬಾಯಿಂದ ನಿಸರ್ಗಕ್ಕೆ ಮರುಪಾವತಿ ಮಾಡಿದನೀ ತೇಗ್‌ಬಹದ್ದೂರ.

ಎಲ್ಲಿಯೂ ನೆಲೆಯಿಲ್ಲದೇ ಬಂದ ಈತ ಇಲ್ಲಿಯೇ ಬೀಡು ಬಿಡಲಾಗಿ ಜನರು ಈತನಿಗಾಗಿ ಹತ್ತಿರದಲ್ಲಿಯೇ ಒಂದು ಗುಡಿಸಲು ಕಟ್ಟಿಸಿಕೊಟ್ಟರು. ದಿನವೂ ಊರವರ ಊಟ, ಬಾಕಿ ಎಲ್ಲಕ್ಕೂ ಹತ್ತಿರದ ಹಳ್ಳದ ತನಕ ಓಟ ಜೊತೆಗೆ ಕಾಲಹರಣಕ್ಕಾಗಿ ತನ್ನಂತೆಯೇ ಕೆಲಸವಿರದ ಕೆಲಜನರಿಗೆ ತತ್ತ್ವೋಪದೇಶ ಮಾಡುತ್ತಾ ಕಾಲಯಾಪನೆ ಮಾಡಿದ.

ಮರುಳು ಶಿವನ ಮಾಯಾಪ್ರಪಂಚವಲ್ಲವೇ ಇದು!

ಮೆಲ್ಲಮೆಲ್ಲಗೆ ಈ ಕೆಲಸವಿರದವರ ಜೊತೆಗೆ ಕೆಲಸಮಾಡುವ ಜನರೂ ಸಹ ಏಕತಾನತೆಯಿಂದ ಹೊರಬರಲು ಈತನ ಪ್ರವಚನಶ್ರವಣದ ಪುಣ್ಯಕಾರ್ಯದಲ್ಲಿ ಪಾಲುಗೊಳ್ಳಲು ತೊಡಗಿದರು. ಮುಖಾತ್ ಕರ್ಣಪರ್ಯಂತ ಒಬ್ಬರಿಂದೊಬ್ಬರಿಗೆ ಈ ಸುದ್ದಿ ಸಾಗುತ್ತಾ ಹಾಗೆ ಸಾಗುತ್ತಿದ್ದ ಸುದ್ದಿಗೆ ಗರಿಮೂಡಿ ಗರಿಗರಿಯಾಗುತ್ತಾ ಕೊನೆಗೆ ಕಂಬಳಿಹುಳು ಚಿಟ್ಟೆಯಾಗುವಂತೆ ಈ ಸನ್ಯಾಸಿ ದೇವಮಾನವನಾದ, ಯತಿಯಾದ, ಯತೀಂದ್ರನಾದ, ಪರಿವ್ರಾಜಕಾಚಾರ್ಯನಾದ, ಹಣೆಗೆ ಮೈಕೈಗಳಿಗೆ ಢಾಳಾಗಿ ವಿಭೂತಿ ಹಚ್ಚಿಸಿಕೊಂಡು ವಿಭೂತಿಪುರುಷನಾದ. ನ್ಯಾರೋ ಹೇಳಿದ ಸುದ್ದಿ ಇದು. ಈತ ತನ್ನ ಪೂರ್ವಾಶ್ರಮದಲ್ಲಿ ಕನ್ನಡನಾಡಿನ ಉತ್ತರದ ಕಡೆ ಒಂದು ಉಪನಗರಿಯಲ್ಲಿ ಸಹಕಾರಿ ಬ್ಯಾಂಕೊಂದರಲ್ಲಿ ಗುಮಾಸ್ತೆಯಾಗಿದ್ದು ಅಲ್ಲಿ ತನ್ನ ಚುರುಕುಬುದ್ಧಿಯನ್ನುಪಯೋಗಿಸಿ ಗ್ರಾಹಕರ ಜಡ ಖಾತೆಗಳಿಂದ ಅಂದರೆ ಡಾರ್ಮೆಂಟ್ ಖಾತೆಗಳಿಂದ ಹಣ ಎಗರಿಸುತ್ತಿದ್ದನಂತೆ. ಅದು ಪತ್ತೆಯಾಗಿ ಬ್ಯಾಂಕು ಈತನನ್ನು ಕೆಲಸದಿಂದ ವಜಾ ಮಾಡಿತಂತೆ. ನಂತರ ಇನ್‌ಕಂ ಟ್ಯಾಕ್ಸ್‌ನವರು ಧಾಳಿ ಮಾಡಿ ಈತನ ಸಂಚಯಿತ ಸಂಪತ್ತನ್ನೆಲ್ಲ ಜಪ್ತಿ ಮಾಡಿದ ಮೇಲೆ ವೈರಾಗ್ಯವಶಾತ್ ಈತ ಸನ್ಯಾಸಿಯಾದನಂತೆ. ಬಿಡಿ, ಅದು ದೇವರ ಲೀಲೆ, ಶ್ರೀಮಂತ ಶೀನಪ್ಪ ನಾಯಕರು ಪುರಂದರದಾಸರಾಗಲಿಲ್ಲವೇ! ಪ್ರಾಚೇತಸರು ವಾಲ್ಮೀಕಿಯಾಗಲಿಲ್ಲವೇ! ಅದಾರೋ ತಲೆಹೋಕರು ಅಂಗುಲಿಮಾಲನಾಗಲಿಲ್ಲವೇ? ಮಹಾಮಹಿಮ ಸ್ವಾಮಿಗಳನ್ನು ಏಕವಚನದಿಂದ ಕರೆಯುವುದೇ! ಅದೂ ದಿನವೂ ನಾಲ್ಕು ಜನರು ಮಾಡುವ ಊಟವನ್ನು ಒಂದೇ ಹೊತ್ತಿಗೆ ಭುಂಜಿಸುವ ಒಪ್ಪತ್ತೂಟದ ನಿಯಮವನ್ನು ಲಾಗಾಯ್ತಿನಿಂದ ಪಾಲಿಸುತ್ತಾ ಬಂದಿರುವ ತಪೋಧನರನ್ನು! ಶಾಂತಂ ಪಾಪಂ ಊಟ ಎಂದೆನಲ್ಲವೇ? ಅವರು ಊಟ ಮಾಡುವ ಪರಿಯೇ ಒಂದು ಸೊಗಸು. ಸ್ನಾನ ಜಪತಪಾದಿಗಳನ್ನು ಪೂರೈಸಿದ ನಂತರ ಶುದ್ಧ ಸಾಗುವಾನಿ ಮರದಿಂದ ತಯಾರಿಸಿದ ಅಂಚುಗಳಿಗೆ ಬೆಳ್ಳಿಯ ಕಟ್ಟುಗಳಿಂದ ಸಿಂಗರಿಸಲ್ಪಟ್ಟು ಕಂಗೊಳಿಸುವ ಪೂರ್ಣಕುಂಭದೊಂದಿಗೆ ಆಸೀನರಾದ ಸ್ವಾಮಿಗಳ ಎಲೆಯ ಮೇಲೆ ಬಗೆಬಗೆಯ ಭಕ್ಷ್ಯಗಳನ್ನು ಬಡಿಸಿದ ನಂತರ ಅರ್ಧ ಪಾತ್ರೆ ಅನ್ನ ಹಾಕಿಸಿಕೊಂಡು ಅದನ್ನು ಚೆನ್ನಾಗಿ ಕಲಸಿ ಮತ್ತೆ ಗುಡ್ಡೆ ಮಾಡಿಕೊಂಡು ಫಿರಂಗಿಗುಂಡಿನ ಗಾತ್ರದ ತುತ್ತು ಮಾಡಿ ಬಾಯಿಗೆ ರವಾನೆ ಮಾಡುತ್ತಿದ್ದ ಪರಿಯೇ ನಯನಮನೋಹರ. ಅವರು ಊಟ ಮಾಡುವ ದೃಶ್ಯವನ್ನೇ ನೋಡಲು ಭಕ್ತಾದಿಗಳು ಸಾಲಾಗಿ ನಿಂತು ನೋಡಿ ಕಣ್ತುಂಬಿಕೊಂಡು ಮುಂದೆ ನಡೆದು ಭೋಜನಶಾಲೆಗೆ ತೆರಳುತ್ತಿದ್ದರಂತೆ, ಪ್ರಸಾದ ಸ್ವೀಕರಿಸಲು.

ಹೀಗೆ ಹೆಸರುವಾಸಿಯಾದ ಶ್ರೀಗಳಿಗೆ ಹೆಸರು ಬೇಡವೇ? ಮೊದಲು ಹವಳದಗುಡ್ಡದ ಸ್ವಾಮೀಜಿ ಎಂದಭಿದಾನಗೊಂಡಿದ್ದ ಅವರು ಮುಂದೆ ಹವಳಗಿರಿ ಗುರುಗಳಾದರು. ಅವರು ಕವಳ ಕತ್ತರಿಸುವ ಪರಿ ಕಂಡು ಪುಳಕಿತರಾದ ಭಕ್ತಾದಿಗಳ ಬಾಯಿಗೆ ಅದು ಆಹಾರವಾಗಿ ಸುರೂಪ ಚಿಕಿತ್ಸೆ, ಅಂದರೆ ಪ್ಲಾಸ್ಟಿಕ್ ಸರ್ಜರಿ ಪಡೆದು ಕವಳಗಿರಿ ಗುರುಗಳು ಎಂದಾಯಿತು. ಹೀಗೆ ಬಹುನಾಮರಾದ ಗುರುಗಳ ಕೀರ್ತಿಯು ವೀರ ಗೊಬ್ರವಾಹನನ (ಕಸದ ಲಾರಿಯ) ಗಂಧದಂತೆ ಎಲ್ಲೆಡೆ ಹರಡಲಾರಂಭಿಸಿ ದೂರದೂರದಿಂದ ಮೂಲೆಮೂಲೆಗಳಿಂದ ಭಕ್ತಾದಿಗಳು ಹಾಗೂ ದರ್ಶನಾಕಾಂಕ್ಷಿಗಳು ಆ ಕ್ಷೇತ್ರಕ್ಕೆ ಆಗಮಿಸಲಾರಂಭಿಸಿದರು. ಅವರವರ ಪಾಪಪುಣ್ಯದ ಸಂಪಾದನೆಯ ಅಲ್ಪ ಭಾಗವನ್ನು ಕಾಣಿಕೆಯಾಗಿ ಅರ್ಪಿಸಿದರು. ಪುಣ್ಯದ ಸಂಪಾದನೆಯ ಪರ್ಸೆಂಟೇಜು ಅದರಲ್ಲಿ ತೀರಾ ಕಡಿಮೆ ಎಂದರೆ ಅದರಲ್ಲಿ ಅತಿಶಯವಿಲ್ಲ. ಮಠದ ನಿರ್ವಹಣೆಗಾಗಿ ಸುತ್ತಮುತ್ತಣ ಸಾಕಷ್ಟು ಜಮೀನುಗಳನ್ನು ಕೊಂಡು ಭಿಕ್ಷುಕರಾಗಿದ್ದ ಗುರುಗಳ ಮಠವು ಸುಭಿಕ್ಷವಾಗುತ್ತಾ ಬೆಳೆದು ಜಗತ್ಪ್ರಸಿದ್ಧವಾಗತೊಡಗಿತು. ಮಠವು ಶ್ರೀಕ್ಷೇತ್ರವಾಗತೊಡಗಿ ಪುರಾಣಿಕರ ಸಂಶೋಧಿತ ಪುರಾಣಗಳಿಂದ ಪವಿತ್ರ ಯಾತ್ರಾಸ್ಥಳವಾಗಿ ಪರಿವರ್ತಿತವಾಯಿತು.

ಹೀಗೆ ದಂತಕಥೆಯಾಗಿ ಬೆಳೆದ ಗುರುಗಳು ಕಾಲ ಕಳೆದಂತೆ ವಯೋವೃದ್ಧರಾಗತೊಡಗಿ ಅವರ ದಂತಗಳು ಪತಿತಪಾವನಾ ಸೀತಾರಾಂ ಎನ್ನುತ್ತಾ ಧರೆಗುರುಳಿ ಸ್ವರ್ಗಸ್ಥವಾಗತೊಡಗಿದವು. ಜೊತೆಗೆ ಅವರ ಆರೋಗ್ಯವೂ ಎದುರುತ್ತರ ಕೊಡಲಾರಂಭಿಸಿತು. ಆಗ ಮಠದ ಖಾಸಗೀ ವೈದ್ಯರು ಅವರಿಗೆ ಈ ರೀತಿ ಪಥ್ಯ ಹೇಳಿದರಂತೆ. ತಾವು ಇನ್ನು ಮಸಾಲೆ ಪದಾರ್ಥಗಳನ್ನು ಸಿಹಿ ಹಾಗೂ ಖಾರ ಭಕ್ಷ್ಯಗಳನ್ನು ಸ್ವೀಕರಿಸುವುದನ್ನು ವರ್ಜಿಸಬೇಕು, ಕೇವಲ ಮೊಸರನ್ನವನ್ನು ಮಾತ್ರ ತಿನ್ನಬೇಕು. ಬದಿಗೆ ಇಷ್ಟೇ ಇಷ್ಟು ಉಪ್ಪಿನಕಾಯಿ ಹಾಕಿಸಿಕೊಳ್ಳಬಹುದು.

ಅಂದಿನಿಂದ ಗುರುಗಳು ಕೇವಲ ಮೊಸರನ್ನದ ಗುಡ್ಡೆ ಮಾಡಿಕೊಂಡು ಅದನ್ನು ಮಾತ್ರ ಭುಂಜಿಸಲಾರಂಬಿಸಿದರು. ಆದರೆ ಊಟದ ಪರಿಮಾಣದಲ್ಲಿ ಮಾತ್ರ ಯಾವುದೇ ಬದಲಾವಣೆಯಾಗಲಿಲ್ಲ. ಆಮೇಲೆ ನೋಡಿ, ಮಠದ ಹಾಗೂ ಗುರುಗಳ ಭಾಗ್ಯಚಕ್ರವು ಉಚ್ಛ್ರಾರ್ಯ ಮಾರ್ಗದ ದಿನಕರನಂತೆ ಪ್ರಖರವಾಗತೊಡಗಿತು. ಗುರುಗಳ ಭೋಜನದರ್ಶನ ಮಾಡಲು ನಿಂತ ಭಕ್ತಾದಿಗಳಿಗೆ ಆ ಮೊಸರನ್ನದ ಗುಡ್ಡೆ ಸಾಕ್ಷಾತ್ ಶಿವನ ರಜತಗಿರಿಯಂತೆ ಕಂಡಿರಬೇಕು. ಸಿಹಿಮೊಗೆಯು ಶಿವಮೊಗ್ಗವಾಗಲಿಲ್ಲವೇ. ಬೆಂದಕಾಳೂರು ಬೆಂಗಳೂರಾಗಲಿಲ್ಲವೇ, ಮಹೀಶೂರಪುರವು ಮೈಸೂರಾಗಲಿಲ್ಲವೇ! ಹಾಗೆಯೇ ಕಾಲಗತಿಯಲ್ಲಿ ಕವಳಗಿರಿಯು ಧವಳಗಿರಿಯಾಯಿತು ಮತ್ತು ಶ್ರೀಗಳು ಧವಳಗಿರಿ ಗುರುಗಳೆಂದು ಪುನರ್ನಾಮಕರಣಗೊಂಡರು.

ಶಿವನಿಗೂ ಮರುಳು, ಜನರಿಗೂ ಮರುಳು, ಜಾತ್ರೆಗೂ ಮರುಳು ಅದಕ್ಕೇ ಅಲ್ಲವೇ ಜನರನ್ನು ಜನಾರ್ಧನ ಎನ್ನುವುದು.

ಇಂತಿಪ್ಪ ಧವಳಗಿರಿ ಪುರಾಣದ ಸಂಭವಕಾಂಡವು ಇಲ್ಲಿಗೆ ಸಮಾಪ್ತಂ. *




*ಹಳ್ಳಿಮುಕ್ಕ-10*

# ಅಂತರಜಾಲ ಮತ್ತು ಜೀವಜಾಲ

**- ನಾಗೇಶ್ ಹೆಗಡೆ**

**ಪೊ**ರಕೆ ಅವಳ ಕೈಯಲ್ಲಿತ್ತು. ಅವಳ ಗುರಿ ನನ್ನ ಕಾಲ ಬಳಿ ಇತ್ತು. 'ಜೇಡ... ಜೇಡ! ಬೇಡ, ಬೇಡ!' ಎಂದು ಕೂಗಿಕೊಂಡೆ.



ಆದದ್ದಿಷ್ಟೆ: ನನ್ನ ಡೆಸ್ಕ್ ಕೆಳಗೆ ಒಂದೆರಡು ಜೇಡರ ಬಲೆಗಳನ್ನು ನಾನು ಹುಷಾರಾಗಿ ಕಾಪಾಡಿಕೊಂಡು ಬಂದಿದ್ದೆ. ಅದನ್ನು ಝಾಡಿಸಲೆಂದು ಇವಳು ಪೊರಕೆ ಎತ್ತಿದ್ದಳು. ಧೂಳು ಹೋದರೆ ಹೋಗಲಿ ಆದರೆ ಜೇಡರ ಬಲೆ ಹೇಗಿದೆಯೊ ಹಾಗೇ ಇರಬೇಕೆಂಬುದು ನನ್ನ ಆಸೆ. ಏಕೆಂದರೆ ಸಿಬಿಐ ಬಲೆ ಬೀಸಿದೆ ಎಂದರೆ ಲೀಡರ್‌ಗಳ ಹಾರಾಟ ಕಡಿಮೆಯಾಗುವ ಹಾಗೆ ಈ ಜೇಡರ ಬಲೆ ಇದ್ದ ತಾಣದಲ್ಲಿ ಸೊಳ್ಳೆಗಳು ಕಮ್ಮಿ ಎಂಬುದನ್ನು ನಾನು ಕಂಡುಕೊಂಡಿದ್ದೆ. ಹಾಗಾಗಿ ಮೇಜಿನ ಕೆಳಗಿನ ಜೇಡರ ಬಲೆಯ ರಕ್ಷಣೆ ಇದ್ದರೆ ನಾನು ಹಾಯಾಗಿ ಕಂಪ್ಯೂಟರಿನ ಜತೆ ಕಾಲಯಾಪನೆ ಮಾಡಬಹುದಿತ್ತು. ಕೆಳಗಿದ್ದ ಜೇಡಗಳು ನನ್ನ ಕಾಲಯಾತನೆ ಕಮ್ಮಿ ಮಾಡುವ ಸಾಧನವಾಗಿದ್ದವು. ಆದರೇನು, ನನಗೆ ಸೊಳ್ಳೆಗಳ ಮೇಲಿದ್ದಷ್ಟೇ ಜಿಗುಪ್ಸೆ ನನ್ನಾಕೆಗೆ ಜೇಡ/ಜಿರಲೆಗಳ ಮೇಲಿದ್ದುದರಿಂದ ಅವಳ ಪೊರಕೆ ಸೇವೆಗೆ ಜಾಲಗಳೆಲ್ಲ ಪಡ್ಚವಾಗುತ್ತಿದ್ದವು.

ಸೊಳ್ಳೆ ಎಂದಾಗಲೆಲ್ಲ ಒಂದು ಪ್ರಶ್ನೆ ಎದುರಾಗುತ್ತದೆ: ಮೊಬೈಲ್ ಟವರ್‌ಗಳ ಹಾವಳಿಯಿಂದಾಗಿ ಮನೆಗುಬ್ಬಿಗಳು, ರಣಹದ್ದುಗಳು, ಜೇನ್ನೊಣಗಳ ಸಂಖ್ಯೆ ಕಡಿಮೆಯಾಗಿದೆ ಎಂಬ ಮಾತು ಹೌದಾದರೆ, ಸೊಳ್ಳೆಗಳ ಹಾವಳಿ ಯಾಕೆ ಕಡಿಮೆ ಆಗಿಲ್ಲ ಎಂದು ನಾನು ಆಗಾಗ ಇವಳೊಂದಿಗೆ ವಾದ ಹೂಡುತ್ತಿದ್ದೆ. ಅವಳ ಉತ್ತರ ರೆಡಿ ಇರುತ್ತಿತ್ತು: 'ನಗರಗಳಲ್ಲಿ ಕಡಿಮೆ ಆಗಿರಬಹುದು; ನಿಮಗೇನು ಗೊತ್ತು? ಟವರೇ ಇಲ್ಲದ ಈ ಹಳ್ಳಿ ಕೊಂಪೆಗೆ ಬಂದು ಠಿಕಾಣಿ ಹೂಡಿದ್ದೀರಿ. ಅದಕ್ಕೇ ಇಲ್ಲಿ ಸೊಳ್ಳೇನೂ ಜಾಸ್ತಿ, ಜಿರಲೇನೂ ಜಾಸ್ತಿ, ಹೆಗ್ಗಣಾನೂ ಜಾಸ್ತಿ' ಎಂದು ಇವಳು ಕುಟುಕುತ್ತಿದ್ದಳು.

ಇಲ್ಲಿ ಟವರ್ ಇಲ್ಲದ್ದರಿಂದ ಸಿಗ್ನಲ್ ತೀರ ದುರ್ಬಲ ಇರುವುದರಿಂದ ನಾನಾ ವಿಧದ ಅನುಕೂಲವೇ ಇದೆ ಅನ್ನಿ. ಫೋನ್ ಕಾಲು ಕಮ್ಮಿ; ಕಾಲು ಏನು, ಅರ್ಧಕ್ಕರ್ಧ ಕಮ್ಮಿ. ಅಂತರಜಾಲವಂತೂ ಅತಿ ನಿಧಾನ. ಒಂದೊಂದು ಈಮೈಲ್ ಅಕ್ಷರವೂ ಕಂಪ್ಯೂಟರಿನಲ್ಲಿ ನಿಧಾನವಾಗಿ, ಒಂದರ ಹಿಂದೊಂದರಂತೆ ಸಾಲು ಸಾಲಾಗಿ ಮೂಡುತ್ತಿರುವುದರಿಂದ ನನಗೆ ಅಂತರಜಾಲ ಬಿಟ್ಟು ಜೇಡರ ಜಾಲದ ಮೇಲೆ ನಿಗಾ ಇಡಲು ಸಾಕಷ್ಟು ಸಮಯ ಸಿಗುತ್ತಿತ್ತು. ಅದೊಂದು ಬಗೆಯ ಧ್ಯಾನಯೋಗ, ಎಲ್ಲರಿಗೂ ಸಿದ್ಧಿಸುವಂಥದ್ದಲ್ಲ. ಅಪರೂಪಕ್ಕೆ

ಸೊಳ್ಳೆಯೊಂದು ಕಾಲ ಕೆಳಗೆ ಸುತ್ತಾಡಲು ಭಯಪಟ್ಟು ಮೇಲಕ್ಕೆ ಮೇಜಿನ ಮೇಲಕ್ಕೇ ಬಂದು ಲ್ಯಾಪ್‌ಟ್ಯಾಪ್ ಎದುರು ಸುಳಿದಾಡಿದಾಗಲೆಲ್ಲ ನಾನು ಚಪ್ಪಾಳೆ ತಟ್ಟಿ ಅದನ್ನು ಹಿಡಿದು ಜೇಡರ ಬಲೆಯ ಮೇಲೆ ಹಾಕುತ್ತೇನೆ. ಸೊಳ್ಳೆ ವಿಲವಿಲ ಒದ್ದಾಡುತ್ತಿರುವಾಗ ಜೇಡ ಎಲ್ಲೋ ಮೂಲೆಯಿಂದ ಸರಕ್ಕನೆ ಸಾಗಿಬಂದು ಅದನ್ನು ದಾರದಿಂದ ಸುತ್ತುವುದನ್ನು ನೋಡುವುದೇ ಸೊಗಸು.

ಮಳೆಗಾಲದ ರಾತ್ರಿಯಲ್ಲಿ ಎಲ್ಲಕ್ಕಿಂತ ಮುದಕೊಡುವ ಜೀವಿಗಳೆಂದರೆ ಮಿಂಚುಹುಳಗಳು. ಅವು ಎಪ್ಪತ್ತರ ದಶಕದ ಪ್ರೇಮಿಗಳ ಹಾಗೆ ಮರ ಸುತ್ತುತ್ತ ಪ್ರೇಮಗೀತೆಯ ಲೇಸರ್ ಶೋ ನಡೆಸುತ್ತ ಹಾದಿತಪ್ಪಿ ನಮ್ಮ ವರಾಂಡಕ್ಕೂ ಬರುತ್ತವೆ. ಕತ್ತಲಲ್ಲಿ ದೂರದಲ್ಲಿ ಅಲ್ಲೊಂದು ಇಲ್ಲೊಂದು ರಸ್ತೆ ದೀಪಗಳು ಉರಿಯುತ್ತ ರಸಭಂಗ ಮಾಡುತ್ತಿದ್ದರೆ ನಾವು ಪ್ರೇಯಿಂಗ್ ಮ್ಯಾಂಟಿಸ್ ಥರಾ 'ಕರೆಂಟ್ ಕೈಕೊಡಬಾರದೆ' ಎಂದು ಪ್ರಾರ್ಥಿಸುತ್ತ ಲೇಸರ್ ಶೋ ನೋಡುತ್ತಿರುತ್ತೇವೆ. ಅವು ಆಗಾಗ ಕಿಟಕಿಯ ಮೂಲಕ ಮನೆಯೊಳಕ್ಕೆ ಬಂದು ನಮ್ಮ ಜೇಡರ ಬಲೆಗೂ ಬೀಳುತ್ತವೆ. ಸರಿರಾತ್ರಿಯ ಕಗ್ಗತ್ತಲ ಕೋಣೆಯಲ್ಲಿ ಜೇಡರ ಬಲೆಗೆ ಬಿದ್ದ ಮಿಂಚುಹುಳದ ಒದ್ದಾಟವನ್ನು ನೋಡಲು ಅದೃಷ್ಟ ಬೇಕು. ಅದಕ್ಕಿಂತ ಮುಖ್ಯವಾಗಿ ಮನೆಯಲ್ಲಿ ಜೇಡರ ಬಲೆ ಇರಬೇಕು. ಜೇಡಕ್ಕೆ ಅದೃಷ್ಟ ಇರಬೇಕು. ಜಠರದಲ್ಲಿ ಬೆಳಕು ಮಿನುಗಿಸುತ್ತಲೇ ಜೀವನ್ಮರಣದ ಹೋರಾಟ ನಡೆಸಿ ಕೊನೆಗೂ ಜೇಡರ ಜಠರಕ್ಕೆ ಸೇರುವ ಈ ಹುಳ ತನ್ನ ಬೆಳಕನ್ನು ಜೇಡರ ಜಠರಕ್ಕೂ ವರ್ಗಾಯಿಸೀತೆ ಎಂದು ನಾನು ನೋಡುತ್ತ ಕೂರುತ್ತೇನೆ.

ಮಳೆಗಾಲದಲ್ಲಿ ಉದ್ದುದ್ದ ಕಾಲಿನ ಸೂರ್ಯನ ಕುದುರೆ (ಪ್ರೇಯಿಂಗ್ ಮಾಂಟಿಸ್) ಆಗೊಮ್ಮೆ ಈಗೊಮ್ಮೆ ದಾರಿ ತಪ್ಪಿ ಮನೆಯೊಳಕ್ಕೆ ಬಂದು ಮೂಲೆಯಲ್ಲಿ ಕೂತು ಮುಂಗಾಲುಗಳಿಂದ ಮುಖ ಒರೆಸಿಕೊಳ್ಳುತ್ತಿರುತ್ತದೆ. ಆಗ ಜೇಡರ ಜಾಲದ ಸುತ್ತಲಿನ ಜೀವಜಾಲ ತುಸು ಸಂಕೀರ್ಣವಾಗುತ್ತದೆ. ಇತ್ತ ಜೇಡ ತನ್ನ ಜಾಲಕ್ಕೆ ಬಿದ್ದ ಸೊಳ್ಳೆಯನ್ನು ದಾರದಲ್ಲಿ ಚೆನ್ನಾಗಿ ಸುತ್ತಿ ಜೊಲ್ಲು ಸುರಿಸುತ್ತ 'ಭರ್ವಾ ಕರೇಲಾ' ಮಾಡುತ್ತಿರುತ್ತದೆ (ಮರಾಠಿಗರ ಭರ್‌ವಾ ಕರೇಲಾ ಅಂದರೆ ಗೊತ್ತಲ್ಲ? – ಹಾಗಲ ಕಾಯಿಯ ತಿರುಳು ತೆಗೆದು ಅದರ ಸ್ಥಾನದಲ್ಲಿ ಮಸಾಲೆ ತುಂಬಿ ಇಡೀ ಕಾಯಿಯನ್ನು ದಾರದಲ್ಲಿ ಸುತ್ತಿ ಕರಿದು ತಯಾರಿಸುವ ರುಚಿಕರ ಪದಾರ್ಥ). ತುಸು ದೂರದಲ್ಲಿ ಸೂರ್ಯನ ಕುದುರೆ ಅದನ್ನೇ ನೋಡುತ್ತ ಜೊಲ್ಲು ಸುರಿಸುತ್ತ ಕೂತಿರುತ್ತದೆ. ಅದು ಜೊಲ್ಲು ಸುರಿಸುವುದು ನಮಗೆ ಕಾಣುವುದಿಲ್ಲ ನಿಜ. ಆದರೆ, ಅದು ಮತ್ತೆ ಮತ್ತೆ ಮುಖ ಒರೆಸಿಕೊಳ್ಳಲು ಬೇರೇನೂ ಕಾರಣ ನನಗೆ ತೋಚುತ್ತಿಲ್ಲ.

ಹಠಾತ್ತಾಗಿ ಸನ್ನಿವೇಶ ಸೀರಿಯಸ್ಸಾಗುತ್ತದೆ. ಸೊಳ್ಳೆ, ಜೇಡ ಮತ್ತು ಪ್ರೇ.ಮಾ. ಈ ಮೂರನ್ನೂ ನೋಡುತ್ತ ಇನ್ನೂ ದೂರದ ಸೂರಿನಲ್ಲಿ ಗಪ್‌ಚಿಪ್ ಕೂತು ಶುಭಶಕುನಕ್ಕಾಗಿ ಕಾಯುತ್ತಿದ್ದ ಹಲ್ಲಿಲ್ಲದ ಹಲ್ಲಿ ಮೇಲೆ ಬಿದ್ದು ಒಂದೇ ಏಟಿಗೆ ಎಲ್ಲವನ್ನೂ ಸ್ವಾಹಾ ಮಾಡಿಬಿಡುತ್ತದೆ.



ನನ್ನ ಪಾಲಿಗೆ ಅದು ಅಪಶಕುನ. ಹಲ್ಲಿ ಅವುಗಳ ಮೇಲೆ ಬಿದ್ದುದಕ್ಕೆ ಅಲ್ಲ; ಹಲ್ಲಿ ಇದ್ದುದು ಗೊತ್ತಾದರೆ ಮರುದಿನವೇ ನಮ್ಮ ಮನೆಯಾಕೆಯ ಕೈಗೆ ಪೊರಕೆ ಬಂದಿರುತ್ತದೆ. ಜೇಡರ ಬಲೆ ಹೋಗಿ ಜೇಡರ ಬಲಿಯಾಗುತ್ತದೆ. ಹಲ್ಲಿಯ ಬಗ್ಗೆ ನನ್ನಾಕೆಗೆ ಭಯವೇನಿಲ್ಲ. ಜಿರಳೆಯನ್ನೇ ಸಲೀಸಾಗಿ ಮುಷ್ಟಿಯಲ್ಲಿ ಹಿಡಿಯಬಲ್ಲ ಧೀರೆಗೆ ಹಲ್ಲಿ ಯಾವ ಲೆಕ್ಕ? ಆದರೆ ಜೇಡರ ಸಂಖ್ಯೆಯಿಂದಾಗಿ ಹಲ್ಲಿಗಳ ಸಂಖ್ಯೆ ಹೆಚ್ಚಿದ್ದರಿಂದಾಗಿ ಜಾಲಾಂಧ್ರದ ಮೂಲಕ ಬಾಗುತ್ತ ಬಳುಕುತ್ತ ನಾಗರಾಜನ ಫ್ಯಾಮಿಲಿ ಬಂದು ಠಿಕಾಣಿ ಹೂಡುತ್ತದೆ ಎಂಬುದು ಅವಳ ವಾದ.

ನಾಗರಹಾವಿನ ಆಗಮನವಾಯಿತೇ ಎಂದು ಕೇಳಬೇಡಿ. ಅದರ ಕತೆಯನ್ನು ಹಿಂದೆಯೇ ವರ್ಣಿಸಿದ್ದೇನೆ. ಸಂಭವಾಮಿ ಯುಗೇ ಯುಗೇ ಎಂಬಂತೆ, ನಮ್ಮ ಮನೆಯಲ್ಲಿ ಸೊಳ್ಳೆಗಳ ಸಂಖ್ಯೆ ಹೆಚ್ಚಿದಂತೆಲ್ಲ, ಜೇಡರ ಸಂಖ್ಯೆ ಹೆಚ್ಚಾಗಿ, ಅವುಗಳ ಬೆನ್ನ ಹಿಂದೆ ಹಲ್ಲಿಗಳ ಸಂಖ್ಯೆ ಹೆಚ್ಚುತ್ತ ಹೋಗಿ, ಅವುಗಳ ನಿಯಂತ್ರಣಕ್ಕೆಂದು ನಾಗಗಳು ಆಗಾಗ ಅವತರಿಸುತ್ತವೆ.

ಅವೇನೂ ಆತಂಕಕ್ಕೆ ಕಾರಣವಲ್ಲ. ನಮ್ಮ ತೋಟದ ಹಾವುಗಳನ್ನು ನಿಯಂತ್ರಿಸಲು ಬಣವೆ ಗೂಬೆಗಳು ಕಾಲಕಾಲಕ್ಕೆ ಬರುತ್ತಿರುತ್ತವೆ. ಹೆಬ್ಬೇವಿನ ಮರದ ಪೊಟರೆಯಲ್ಲಿ ಹಗಲೆಲ್ಲ ನಿದ್ದೆ ಹೊಡೆಯುತ್ತ ರಾತ್ರಿಪಾಳಿಗೆ ರೆಡಿಯಾಗಿರುತ್ತವೆ. ತೀರ ಸೋಮಾರಿಗಳಾಗಿ ರಾತ್ರಿಯೂ ಪೊಟರೆಯಲ್ಲೇ ಕೂತಿದ್ದರೆ ಅವಕ್ಕೆ ಉಳಿಗಾಲವಿಲ್ಲ. ಕಾಡುಬೆಕ್ಕುಗಳು ಮೀಸೆ ತಿರುವುತ್ತ ಮೆಲ್ಲಗೆ ಮರವೇರಿ ಪೊಟರೆಗೆ ಮೂತಿ ಇಡುತ್ತವೆ. ಬೆಕ್ಕು ಹೀಗೆ ಅಡ್ಡ ಹಾಯ್ದರೆ ಗೂಬೆಗೆ ಅಪಶಕುನ.

ಈ ಸುಂದರ ಜೀವಜಾಲ ಹೆಚ್ಚುದಿನ ಉಳಿಯಲಿಕ್ಕಿಲ್ಲ. ನಮ್ಮೂರಿಗೂ ಮೊಬೈಲ್ ಟವರ್‌ಗಳು, ಇಂಟರ್‌ನೆಟ್ ವ್ಯವಸ್ಥೆಗಳು ಬರಲಿವೆಯೆಂದು ಅಭಿವೃದ್ಧಿಯ ಹರಿಕಾರರು ಸೂಚಿಸುತ್ತಿದ್ದಾರೆ. ಅವೆಲ್ಲ ಬಂದಿದ್ದೇ ಆದರೆ ನಾನು ಲೀಲಾಜಾಲವಾಗಿ ಅಂತರಜಾಲದಲ್ಲಿ ವಿಹರಿಸುತ್ತ ಕಾಲಿಗೆ ಪೊರಕೆ ತಾಗಿದರೂ ಖಬರೇ ಇಲ್ಲದೆ ಈ ಜೀವಜಾಲವನ್ನು ಮರೆತೇಬಿಡುವ ಸಂಭವವಿದೆ.

*

---

**ಕೊರವಂಜಿ ಅಪರಂಜಿ ಟ್ರಸ್ಟ್**

**ಆಯೋಜಿಸಿರುವ**

**ಪಡುಕೋಣೆ ರಮಾನಂದರಾವ್ ಸ್ಮಾರಕ**

**ನಗೆ ಲೇಖನ ಸ್ಪರ್ಧೆ 2011**

**ಲೇಖಕರ ಗಮನಕ್ಕೆ**

**ಹಾಸ್ಯಲೇಖನ ಸ್ಪರ್ಧೆಗೆ ಲೇಖನಗಳನ್ನು ಕಳುಹಿಸಲು**

**ಕಡೆಯ ದಿನಾಂಕ 31-10-2011**

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

- ದಂನಳ

- 'ಗಾಲಿಬಾಬ ಮತ್ತು ಎಷ್ಟು ಮಂದಿ ಕಳ್ಳರು' ಚಿತ್ರಕ್ಕೆ ಬಳ್ಳಾರಿಯಲ್ಲಿ ಶೂಟಿಂಗ್ ನಡೆಯಲಿದೆ ಎಂದು ಸುದ್ದಿ.
- If sari is in your genes you don't need jeans
- ನಂಬಿಕೆಗಳನ್ನು ನೀವು ನಂಬುತ್ತೀರಾ?
- ಪತಿ, ಪತ್ನಿ ಔರ್ ವೊ ಮಾದರಿಯಲ್ಲಿ 'ಆಡಂ, ಈವ್ ಮತ್ತು ಅವಳು' ಎಂಬುದು ಆಗ ಇದ್ದಿರಬಹುದೆ?
- ಕೊನೆಗೊಮ್ಮೆ ನೋಡಿದಾಗ ರ್‍ಯಾಂಕ್ ವಿದ್ಯಾರ್ಥಿಗೂ ನಪಾಸಾದ ವಿದ್ಯಾರ್ಥಿಗೂ ಏನೂ ವ್ಯತ್ಯಾಸ ಇರುವುದಿಲ್ಲ.
- Medicine is dead food; food is dead medicine.
- ಹಿಸ್ ಮಾಸ್ಟರ್ಸ್ ವಾಯ್ಸ್ ಎಂದರೆ ಗೊತ್ತು. ಹರ್ ವಾಯ್ಸ್ಸ್ ಮಾಸ್ಟರ್ ಎಂದರೆ?
- ಹಣ ಉಳಿಸಲು ಸಲಹೆ ನೀಡಿ. ಅತ್ಯುತ್ತಮ ಸಲಹೆಗೆ ರೂ. 500 ಬಹುಮಾನ. ಬಹುಮಾನ ಗೆದ್ದ ಸಲಹೆ: ಬಹುಮಾನದ ಮೊತ್ತವನ್ನು ಕಡಿಮೆ ಮಾಡಿ!

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಪೊಂಗಲ್‌ಗೂ ಇಡ್ಲಿಗೂ ಏನು ವ್ಯತ್ಯಾಸ? ಪೊಂಗಲ್‌ಗೆ ರಜಾ ಸಿಗುತ್ತದೆ.
- When your time is good, your mistakes are taken as a joke! But when your time is bad, even your jokes are noticed as mistakes!
- ನೀವು ಬೆಳಕಿನಲ್ಲಿದ್ದಾಗ ಎಲ್ಲವೂ ನಿಮ್ಮನ್ನು ಹಿಂಬಾಲಿಸುತ್ತದೆ. ಆದರೆ ನೀವು ಕತ್ತಲಿಗೆ ಹೋದಾಗ ನಿಮ್ಮ ನೆರಳು ಕೂಡ ನಿಮ್ಮನ್ನು ಹಿಂಬಾಲಿಸುವುದಿಲ್ಲ.
- ನಾಣ್ಯ ಝುಣ ಝುಣ ಎಂದು ಶಬ್ದ ಮಾಡುತ್ತದೆ, ಆದರೆ ಕರೆನ್ಸಿ ನೋಟ್ ನಿಶ್ಯಬ್ಧ. ಆದುದರಿಂದ ಮೌಲ್ಯ ಹೆಚ್ಚಿದಾಗ ಸುಮ್ಮನಿರುವುದೇ ಸರಿ.
- ದಪ್ಪನಾದ ಮೇಲೆ ಸಣ್ಣಗಾಗಲು ವಾಕಿಂಗ್ ಶುರು ಮಾಡುವ ಬದಲು ಸಣ್ಣನಾಗಿರುವಾಗಲೇ ದಪ್ಪಗಾಗದಿರಲು ವಾಕಿಂಗ ಮಾಡುವುದು ಲೇಸು.
- Power corrupts and the fear of losing power corrupts absolutely.
- ಭ್ರಷ್ಟಾಚಾರವನ್ನು ನಿಯಂತ್ರಿಸಿ ಎಂದರೆ ಸರ್ಕಾರ ಅದರ ವಿರುದ್ಧ ಹೋರಾಡುವವರನ್ನು ನಿಯಂತ್ರಿಸಲು ಹೊರಟಿದೆ!
- ಪ್ರಕೃತಿ ಎಂಬುವುದು ಚಿನ್ನದ ಮೊಟ್ಟೆ ಇಡುವ ಕೋಳಿ....

*





# ಇಂದಿನ ಹಾಲು-ಜೇನು ನಾಡಿನ ಒಂದು ಪ್ರಸಂಗ


- ವಾಣೀ ಸುರೇಶ್

**ಹ**ತ್ತಿರದಲ್ಲೇ ಇದ್ದ ಇಂಟರ್ ಸ್ಟೇಟ್(ಐ) 96ನಲ್ಲಿ ಎಪ್ಪತ್ತು ಮೈಲಿ ಸ್ಪೀಡಲ್ಲಿ ಕಾರುಗಳಲ್ಲಿ ಧಾವಿಸ್ತಿರೋರೂ ಓದ್ಲೇಬೇಕು. ಹಾಗೆ ಕಣ್ಣಿಗೆ ರಾಚೋ ಹಾಗೆ ''ಗೋಯಿಂಗ್ ಔಟ್ ಆಫ್ ಬಿಸಿನೆಸ್'' ಅಂತ, ಹಳದಿ ಬಣ್ಣದ ಮೇಲೆ ಎರಡಡಿ ಕಪ್ಪಕ್ಷರಗಳಲ್ಲಿ ಬರೆದಿದ್ದ ಬ್ಯಾನರ್ ನೇತು ಹಾಕಿದ್ರು - ಆ ಬುಕ್ ಸ್ಟೋರ್ ಬೋರ್ಡ್ಸ ನೆತ್ತೀ ಮೇಲೆ!

Ann Arborನಲ್ಲಿ ತನ್ನ ಮುಖ್ಯ ಮಳಿಗೆಯಿಂದ ಪ್ರಾರಂಭಿಸಿ ಈ ಬೃಹತ್ ದೇಶದ ಉದ್ದಗಲಕ್ಕೂ ಹರಡಿರುವ "Borders store" - ನಾಲ್ಕು ದಶಕಗಳಿಂದ ಪ್ರಖ್ಯಾತವಾದ - ಪುಸ್ತಕ, ಸೀಡಿಗಳು ಹಾಗೂ ಕಾಫಿ ಕೆಫೆಯನ್ನುಳ್ಳ ಒಂದು ಅತಿ ದೊಡ್ಡ ಚೈನ್ ಸ್ಟೋರ್. ''ಬಾರ್ನ್ಸ್ ಎಂಡ್ ನೋಬಲ್ಸ್'' ಎನ್ನುವ ಮತ್ತೊಂದು ಹೆಸರಾಂತ ದೈತ್ಯ ಸರಪಳಿ ಪುಸ್ತಕದ ಮಳಿಗೆಯ ಅತ್ಯಂತ ನಿಕಟ ಪ್ರತಿಸ್ಪರ್ಧಿ! ಇಂಥಾ ಸಚ್ಚಾರಿತ್ರ್ಯವುಳ್ಳ ಅಂಗಡೀಗೆ ಪಾಪ ಇಂಥಾ ದುರ್ಗತಿಯಾಯ್ತಲ್ಲಾಂತನ್ಕೊಂಡೇ ಒಂದು ಸಂಜೆ ನಾವೂ ಅಲ್ಲೀಗ್ ಹೋದ್ವು. ಯಾಕೋ ಥಟ್ಟಂತ - ''ಡಿಸ್ಟ್ರೆಸ್ ಸೇಲ್‌ನಲ್ಲಿ ಸಾಮಾನು ಕೊಂಡುಕೊಂಡವರ ಏಳಿಗೆಯಾಗಲ್ಲ'' - ಅಂತ ನಮ್ಮ ಹಳೇತಲೆಮಾರಿನವರು ಹೇಳ್ತಿದ್ದಕ್ಕೂ ಇಲ್ಲೀಗ ನಡೀತಿರೋದಕ್ಕೂ ನನ್ನ ಮನಸ್ಸು ತಾಳೆ ಹಾಕಕ್ಕೆ ನೋಡಿತು.

ಒಳಗೆ ಹೆಜ್ಜೆಯಿಟ್ಟಾಗಿಂದಾ ಅಲ್ಲಿ ಎಲ್ಲೆಲ್ಲೂ ಹಾಕಿದ್ದ ''ಗೋಯಿಂಗ್ ಔಟ್ ಆಫ್ ಬಿಸಿನೆಸ್ಸ್''ನ ಬ್ಯಾನರ್ಗಳೇ! ಅಲ್ಲಿದ್ದ ಎಲ್ಲಾ ಪುಸ್ತಕಗಳ, ವಸ್ತುಗಳ ಮೇಲೂ ಶೇಖಡಾ ಇಪ್ಪತ್ತರಿಂದ ನಲವತ್ತರಷ್ಟು ರಿಯಾಯಿತಿ ದರದಲ್ಲಿ ಭರದ ಮಾರಾಟ ನಡೆಯುತ್ತಿತ್ತು.

ಅವತ್ತು, ಏಕ್ ಹಾರ್ಟ್ ಟೋಲ್ ಮಹಾಶಯನ ''ದ ಪವರ್ ಆಫ್ ನೌ'' ಅನ್ನೋ ಹತ್ತೊಂಭತ್ತು ಡಾಲರಿನ ಪುಸ್ತಕ ಕಮ್ಮಿ ಬೆಲೆಗೆ ಸಿಗತ್ತೇನೋಂತ ದೂರದ ಆಸೆ ಇಟ್ಕೊಂಡು ಹೋಗಿದ್ದ ನಾನು, ಸುಮಾರು ನಮ್ಮ ಮಲ್ಲೇಶ್ವರದ ಬಸ್ ಟರ್ಮಿನಸ್ಸಿನ ಎರಡರಷ್ಟು ದೊಡ್ಡದಾಗಿದ್ದ ಆ ಮಳಿಗೆಯಲ್ಲಿ ಅದಕ್ಕಾಗಿ ತಲಾಶ್ ಮಾಡೊಕ್ಕೆ ಶುರುಮಾಡ್ದೆ. ವ್ಯಕ್ತಿತ್ವ ವಿಕಸನ, ಧರ್ಮ, ಇತ್ಯಾದಿ ಅಲ್ಲಿದ್ದ ಅಸಂಖ್ಯ ವಿಭಾಗಗಳಲ್ಲೂ ಅದು ಕಾಣಿಸದ್ರಿಂದ ಅದರ ಬಗ್ಗೆ ವಿವರಗಳನ್ನು ವಿಚಾರಿಸಲು ಚೆಕ್ ಔಟ್ ಕೌಂಟರ್ ಬಳಿಗೆ ಹೋಗಲೇಬೇಕಾಯ್ತು. ಅಷ್ಟು ದೊಡ್ಡ ಅಂಗಡಿಯನ್ನು ನಿಭಾಯಿಸ್ತಿದ್ದ ಕೇವಲ ಇಬ್ಬರು ಕೆಂಪು ಟೀ ಶರ್ಟ್ ಸಮವಸ್ತ್ರಧಾರಿಗಳ ಪೈಕಿ ಒಬ್ಬಾಕೆ ನನ್ನನ್ನು ಒಂದು ನಿಮಿಷ ತಡೆಯಕ್ಕೆ ಹೇಳಿ, ತನ್ನ ಮುಂದಿದ್ದ ಕಂಪ್ಯೂಟರಿನಲ್ಲಿ ತಲೆ ತೂರಿಸಿದಳು. ಮೂರುನಾಲ್ಕು ನಿಮಿಷಗಳಾದ ಮೇಲೆ ಆ ಪುಸ್ತಕ, ''ನ್ಯೂ ಏಜ್ ಬುಕ್ಸ್''




ಅನ್ನೋ ವಿಭಾಗದಲ್ಲಿ ಸಿಗುತ್ತೇಂತ, ಇಲ್ಲಿಯವರ ಮಾಮೂಲಿನ ಕೃತಕತೆ ತುಂಬಿದ ಮುಗುಳ್ನಗೆ ತುಳುಕಿಸ್ತಾ ಹೇಳಿದಳು. ಕೆಲಸ ಕಳೆದುಕೊಳ್ಳುತ್ತಿರುವಾಗ ಸಹಾ ಅದರ ಪರಿವೆಯೇ ಇಲ್ಲದೇ ಕೌಂಟರಿಗೆ ಬರುತ್ತಿದ್ದ ಗಿರಾಕಿಗಳ ಜೊತೆ ನಗೆಚಾಟಿಕೆ ಮಾಡ್ತಾ ಅವರಿಬ್ರೂ ಹಾಗೆ ವ್ಯವಹರಿಸ್ತಿದ್ದಿದ್ದನ್ನ ನೋಡಿ ನಂಗೆ ಸ್ವಲ್ಪ ಆಶ್ಚರ್ಯವೇ ಆಯ್ತನ್ಬೇಕು!

ಅಷ್ಟರಲ್ಲಿ, ಇದನ್ನೆಲ್ಲಾ ದೂರದಿಂದ ಗಮನಿಸಿದ್ದ ನಮ್ಮಗ, ನನ್ನನ್ನು ಸಮೀಪಿಸಿ – ''ಅಮ್ಮ, ನಿಂಗೆ ಗೊತ್ತಿಲ್ಲ ಇದು ಹೇಗೆ ವರ್ಕ್ ಆಗತ್ತೇಂತ. ಎಲ್ಲಾದ್ದಕ್ಕೂ ಇಷ್ಟು ಚೆನ್ನಾಗಿ, ಚಿಕ್ಕ ಮಗೂಗೂ ಅರ್ಥವಾಗೋ ಹಾಗೆ ಲೇಬಲ್ ಮಾಡಿದ್ದಾರಲ್ಲ, ಹೀಗಿರುವಾಗ ಅವಳಿಗೇನ್ ಗೊತ್ತಿರತ್ತೇಂತನ್ಕೊಂಡು ಅವಳನ್ನು ಕೇಳಕ್ಕೆ ಹೋದೆ? ಹೋಗ್ಲಿ ಅಷ್ಟೊತ್ತು ಕಾಯಿಸಿದಳಲ್ಲ, ಏನಾದರೂ ಸರ್ಯಾಗಿ ಹೇಳಿದ್ಲಾ? ಯಾಕ್ಹೀಗೆ ಅಂತಿದ್ದೀನೀಂತ ಆಮೇಲೆ ನಿಧಾನವಾಗಿ ಹೇಳ್ತೀನಿ ತಡಿ'' – ಅಂತಂದ.

ಅನಂತರ, ಆ ಪುಸ್ತಕದ ಸಮುದ್ರದಲ್ಲಿ ಅದುವರೆಗೂ ನನ್ನದೇ ಹುಡುಕಾಟದಲ್ಲಿದ್ದಿದ್ರಿಂದ ನಾನಿನ್ನೂ ಎಕ್ಸ್‌ಪ್ಲೋರ್ ಮಾಡಿರದ ಆ ಬೃಹತ್ ಮಳಿಗೆಯಲ್ಲಿನ ಸ್ವಲ್ಪ ಒಳಮುಖವಾಗಿದ್ದ ಮುಂಬದಿಯ ಬಲ ತುದಿಗೆ ಹೋದೆ.

ಅಲ್ಲಿ ನೋಡಿದ್ರೆ ಈ ಅಂಗಡಿಯ ಅತ್ಯಂತ ಸುಸಜ್ಜಿತ ಕೆಫೆಯ ಗತಕಾಲದ ಪಳೆಯುಳಿಕೆಗಳ ಸಾಲುಗಳು! ಮುದ್ದಾದ ಸ್ಟೈನ್ಲೆಸ್ ಸ್ಟೀಲ್ ಸಿಂಕುಗಳಿರುವ ಸ್ಟೀಲಿನ ಕೌಂಟರ್ ಟಾಪು, ಫ್ರಿಜ್ಜು ಮೈಕ್ರೋವೇವುಗಳಿಂದಾ ಹಿಡಿದು – ಅತ್ಯಾಧುನಿಕ ಎಸ್ಪ್ರೆಸ್ಸೋ ಕಾಫೀ ಮೇಕರ್ರುಗಳು, ಟೋಸ್ಟರ್ಗಳು, ಟ್ರೇಗಳು, ಕಾಫೀ ಪಾಟುಗಳು, ಮಗ್ಗುಗಳು, ಪಿಂಗಾಣಿ ತಟ್ಟೆಗಳು, ಹೊಳೆಯುತ್ತಿದ್ದ ಚಾಕು–ಫೋರ್ಕು–ಚಮಚಗಳು ಹಾಗೂ ಸಾಲ್ಟ್ ಎಂಡ್ ಪೆಪ್ಪರ್ ಶೇಕರ್ರುಗಳವರೆಗೂ ಥಳಥಳಿಸುವ, ವೈವಿಧ್ಯಮಯ ವಸ್ತುಗಳು ಅಣಿಯಾಗಿರಿಸಲ್ಪಟ್ಟಿದ್ದವು. ಮುಂದೆ ಅಲ್ಲೇ ಒಂದು ಪಕ್ಕದಲ್ಲಿ ಡೈನಿಂಗ್ ಟೇಬಲ್ಲುಗಳು, ಕುರ್ಚಿಗಳು, ಸೋಫಾ ಸೆಟ್ಟುಗಳು, ತರಹೇವಾರಿ ಪ್ಲಾಸ್ಟಿಕ್ ಹೂ ಗಿಡ ಬಳ್ಳಿಗಳು, ಪೇಯಿಂಟಿಂಗ್‌ಗಳು, ಇನ್ನೊಂದು ಪಕ್ಕದಲ್ಲಿ ಆಫೀಸಿನ ಮೇಜು–ಕುರ್ಚಿ–ಕಪಾಟುಗಳು, ಹಲವಾರು ಬಣ್ಣ–ವಿನ್ಯಾಸಗಳ ಫೋನುಗಳು, ಕಂಪ್ಯೂಟರ್ರುಗಳು, ಪ್ಲಗ್ಗುಗಳು – ಎಕ್ಸ್ಟೆನ್ಶನ್ ಕಾರ್ಡುಗಳ ರಾಶಿ, ಪೆನ್ನುಗಳು, ಪೆನ್ಸಿಲ್ಲುಗಳು, ಕೊನೆಗೆ ಚಕ್ರಗಳಿರುವ ದೊಡ್ಡ ಕಸದ ಬುಟ್ಟಿಗಳು ಸಹಾ – ಅಂದ್ರೆ ನೀವೇ ಯೋಚಿಸಿ! ಆದ್ರೆ ಸದ್ಯ, ಅದರ ಪಕ್ಕದಲ್ಲೆಲ್ಲೂ ಬ್ರಶ್ಶು, ಮಾಪುಗಳು ಇರ್ಲಿಲ್ಲ ಅಷ್ಟೇ!

ಅಂತೂ, ದೈನಂದಿನ ಬದುಕಿಗೆ ಬೇಕಾದ ದಿನಸಿ, ಹಾಲು–ಮೊಸರು–ಹಣ್ಣುಗಳನ್ನು ಬಿಟ್ಟು, ಮ್ಯೂಸಿಕ್ ಸೀಡಿಗಳಿಂದಾ ಹಿಡಿದು ತೊಟ್ಟಿಲಿನ ಕಂದನ ಹೊದ್ದಿಕೆಗಳವರೆಗೂ,



ಟೆಡ್ಡಿಬೇರುಗಳಿಂದಾ ಹಿಡಿದು ಟಾಯ್ ಟ್ರೇನಿನವರೆಗೂ, ಮಕ್ಕಳೊಂದಿಗರ ಮನೆಯ ದಿನಬಳಕೆಯ ಎಲ್ಲಾ ಸಾಮಾನುಗಳೂ ಡಿಸ್ಕೌಂಟ್ ಸೇಲಿನ ಕೆಂಪು ಹಳದಿ ಚೀಟಿಗಳನ್ನು ಅಂಟಿಸ್ಕೊಂಡು ಮರದ ಕಪಾಟುಗಳ ಮೇಲೆ ಸಾಲಾಗ್ ಕೂತಿದ್ವು. ಒಟ್ಟಿನಲ್ಲಿ ಹೇಳಬೇಕೂಂದ್ರೆ ಮೊಳೆ ಹೊಡೆದು ಭದ್ರವಾಗಿರಿಸಿದ್ದವೂ ಸೇರಿದಂತೆ, ಅಲ್ಲಿ ಎಲ್ಲೆಲ್ಲಿ ನೋಡಿದರೂ ಕಣ್ಣಿಗೆ ಬೀಳುತ್ತಿದ್ದ ಎಲ್ಲ ವಸ್ತುಗಳೂ ಕೊಳ್ಳಲು ಲಭ್ಯ!

ಅಷ್ಟಕ್ಕೇ ಮುಗಿಯಲಿಲ್ಲ ನಮ್ಮ ಅನುಭವ. ಆರೆಂಟು ದಿನಗಳಾದ್ಮೇಲೆ ಮತ್ತೊಮ್ಮೆ ನಾವಲ್ಲಿಗೆ ಹೋದ್ವಿ. ಇಲ್ಲಿಯ ಅನೇಕ ವಿಷಯಗಳಂತೆ ಈ bankruptcy ಪ್ರಕ್ರಿಯೆಯೂ ಇಷ್ಟು ಸುವ್ಯವಸ್ಥಿತವಾಗಿ ನಡೆಯುವ ರೀತಿಯನ್ನು ನಾನು ಗಮನಿಸಿಯೇ ನಂಬಬೇಕಿದ್ದದ್ದು ನನ್ನ ಆಸಕ್ತಿಯಾದರೆ, ಪುಸ್ತಕದ ಹುಳುವಾದ ಮಗನಿಗೆ, ಅದಕ್ಕಿಂತಾ ಹೆಚ್ಚಾಗಿ ಇಲ್ಲಿಯ ಛಳಿಯ ಅನೇಕ ಸಂಜೆಗಳಲ್ಲಿ ಘಮ್ಮೆನ್ನುವ ಕಾಫಿವಾಸನೆಯೊಂದಿಗೆ ಮೃದುವಾಗಿ ತೇಲಿ ಬರುವ ಹಿನ್ನಲೆ ಸಂಗೀತದೊಂದಿಗೆ, ಬೆಚ್ಚಗಿನ ಒಳಾಂಗಣದ ಹಿತದಲ್ಲಿ ಕಪಾಟುಗಳ ಮಧ್ಯೆ ನಡೆಯುತ್ತಾ, ತನ್ನ ನೆಚ್ಚಿನ ಹವ್ಯಾಸವಾಗಿ ಹುಡುಕಿದ್ದ ಪುಸ್ತಕಗಳನ್ನು ಅಲ್ಲೇ ಕುಳಿತು ಬಿಸಿ ಕಾಫಿ ಹೀರುತ್ತಾ ಸ್ವಲ್ಪ ಹೊತ್ತು ತಿರುವಿ ಹಾಕಿ, ನಂತರ ಕೊಂಡುಕೊಂಡಿದ್ದ – ನಾಸ್ಟಾಲ್ಜಿಯಾದ ಚಪಲ.... ಅಲ್ಲಿದ್ದ ಪುಸ್ತಕ ಪ್ರಿಯರೆಲ್ಲರ ಮನಸ್ಸಲ್ಲೂ ಹೀಗೇ ಇರ್ಬೇಕೂಂತ ನನ್ನ ಭಾವನೆ....

ಈ ಸಲ ನೋಡಿದರೆ ಅಷ್ಟು ದೊಡ್ಡ ಆ ಮಳಿಗೆ, ಮೈಸೂರು ದಸರಾ ವಸ್ತುಪ್ರದರ್ಶನದ ಕೊನೇ ದಿನದ ಹಾಗೆ ಖಾಲಿ ಖಾಲಿ ಹೊಡೀತಿತ್ತು. ರಿಯಾಯಿತಿ ಹೆಚ್ಚಿಸಿ, ತೂಗು ಹಾಕಿದ್ದ 60ರಿಂದ 80 ಪರ್ಸೆಂಟ್ ಅಂತಿದ್ದ ಬ್ಯಾನರ್ಗಳು ಈಗೆಲ್ಲೆಲ್ಲಿ ನೋಡಿದ್ರು! ಒಡಲು ಬರಿದಾದ ಪುಸ್ತಕದ ಕಪಾಟುಗಳಿಗೂ ಪ್ರೈಸ್ ಟ್ಯಾಗುಗಳು, ಅವುಗಳನ್ನೂ ಆಸಕ್ತರಿಗೆ ದಾಟಿಸುವ ತವಕ! ಮಕ್ಕಳ ವಿಭಾಗದಲ್ಲಿದ್ದ ಅಸಂಖ್ಯ ಪುಸ್ತಕಗಳು, ಆಟಿಕೆಗಳು, ಬೊಂಬೆಗಳು ಎಲ್ಲಾ ಮಂಗಮಾಯವಾಗಿದ್ದವು. ಕೆಫೆಯ ಸಾಮಗ್ರಿಗಳಲ್ಲಿ ಬರೀ ಸಾಲ್ಟ್ ಎಂಡ್ ಪೆಪ್ಪರ್ ಶೇಕರ್ರು, ಚಾಕು–ಚಮಚ, ಮಗ್ಗುಗಳು ಮಾತ್ರ. ಪಾಪ ಇನ್ನೂ ಮುಖ ಒಣಗಿಸ್ಕೊಳ್ಳದೇ ತಮ್ಮ ಹೊಸ ಒಡೆಯರಿಗಾಗಿ ಕಾಯ್ಕೊಂಡು ಕೂತಿದ್ವು. ಕ.ಬು.ಗಳ ಅಡ್ರೆಸ್ಸೇ ಇರ್ಲಿಲ್ಲ! ಮಿಕ್ಕೆಲ್ಲ ಭಾರೀ ಗಾತ್ರದ ಕಬೋರ್ಡುಗಳ ಮೇಲೂ ಈ ಸಲ ಅಂಟಿಸಿದ, ಹಳದಿ ಮತ್ತು ಗುಲಾಬಿ ಬಣ್ಣದ ''ಸೋಲ್ಡ್ ಔಟ್'' ಚೀಟಿಗಳು.

ಈ ದೇಶದಲ್ಲಂತೂ, ಮನೆಯಂಗಳದ ಲಾನನ್ನು ಕಳೆರಹಿತವಾಗಿ ಸದಾ ಹಸುರಾಗಿರಿಸಿಕೊಳ್ಳೋದ್ರಿಂದಾ ಹಿಡಿದು, ಮರಗಳ ಕೊಂಬೆ ಕತ್ತರಿಸಿ ಚಿಕ್ಕದಾಗಿ ಶಿಸ್ತಿನ ಸಿಪಾಯಿಯಂತಿರಿಸಿಕೊಳ್ಳಕ್ಕೆ, ಕೊನೆಗೆ ನಿಮ್ಮ ಮುದ್ದು ನಾಯಿಮರಿಯ ಶೌಚವನ್ನು ತೆಗೆದು ನಿಮ್ಮ ಯಾರ್ಡನ್ನು ಶುದ್ಧವಾಗಿರಿಸಿಕೊಳ್ಳಕ್ಕೂ ಕೂಡಾ ನೀವು ಅವಲಂಬಿಸಬಹುದಾದ ಸರ್ವಿಸ್‌ಗಳಿವೆಯಲ್ಲ! ಅವುಗಳಲ್ಲಿ ಪ್ರಸ್ತುತ ನಾವೀಗ ಸಾಕ್ಷಿಯಾಗಿದ್ದು ಇಲ್ಲಿಯ ''ಲಿಕ್ವಿಡೇಶನ್ ಗ್ರೂಪ್ಸ್''ನ ಚಟುವಟಿಕೆಗೆ. ಸ್ಥೂಲವಾಗಿ ಹೇಳಬಹುದಾದರೆ ಇವುಗಳು ಮಾಡುವ ಕೆಲಸದ ವೈಖರಿಯನ್ನೇನೋ, ನಮ್ಮಲ್ಲಿಯ ಮಾವಿನ ಹಣ್ಣು, ಕರಿಬೇವಿನ ಸೊಪ್ಪು, ನುಗ್ಗೇಕಾಯಿ ಇತ್ಯಾದಿಗಳ ಗುತ್ತಿಗೆಯೋರ ವ್ಯವಹಾರಕ್ಕೆ ಹೋಲಿಸಬಹುದೂನಿಸ್ತು ನಂಗೆ.

ಇಂದಿನ ಇಲ್ಲಿಯ ರಿಸೆಶನ್ ದಿನಗಳಲ್ಲಿ ಬೃಹತ್ ಸಂಸ್ಥೆಯೊಂದು ಈ ರೀತಿ ದಿವಾಳಿಯ ಹಂತವನ್ನು ತಲುಪಿದಾಗ ಅದು ತನ್ನ ಕೆಲಸಗಾರರಿಗೆ ಅದರ ಸುಳಿವನ್ನೂ ಬಿಟ್ಟುಕೊಡದೇ, ಕೆಲಸ ಮುಗಿಸಿ ಹಿಂದಿರುಗಲಿರುವ ಅವರೆಲ್ಲರಿಗೂ ಇದ್ದಕ್ಕಿದ್ದಂತೆ ಒಂದು ಸಂಜೆ ವಾಸ್ತವವನ್ನು ತಿಳಿಸಿ ಮಾರನೆಯ ದಿನದಿಂದ ಕೆಲಸಕ್ಕೆ ಬರಬಾರದೆಂದು ಹೇಳಿ, ಅವರವರ ಸಿವಿಯಿರೆನ್ಸ್ ಪೇ ಪ್ಯಾಕೇಜನ್ನು ಕೊಟ್ಟು, ಸೆಕ್ಯೂರಿಟಿ ಗಾರ್ಡುಗಳ ಕಾವಲಿನ ಕಟ್ಟುನಿಟ್ಟಿನಲ್ಲಿ ಅತ್ಯಂತ ನಿರ್ದಾಕ್ಷಿಣ್ಯವಾಗಿ ಅವರನ್ನು ಹೊರಗೆ ಕಳಿಸೋದು – ಇವೆಲ್ಲಾ ನಿಮಗೆ ತಿಳಿದಿರಲೇಬಹುದು.

ಆದ್ರೆ ಇಲ್ಲಿ ಇನ್ನೊಂದು ಸ್ವಲ್ಪ ವ್ಯತ್ಯಾಸ. ದಿವಾಳಿಯಾಗಲಿರುವ ಸಂಸ್ಥೆಯು ಇಷ್ಟಾದ ಮೇಲೆ, ಬೆರಳೆಣಿಕೆಯಷ್ಟೇ ಉಳಿಸಿಕೊಂಡ ನಂಬಿಕಸ್ಥ ಕೆಲಸಗಾರರಿಂದ ತಾನು ಜವಾಬ್ದಾರಿ ವಹಿಸಲಿರುವ ಲಿಕ್ವಿಡೇಶನ್ ಗ್ರೂಪಿಗೆ ತನ್ನ ವಹಿವಾಟು, ಲೆಕ್ಕ–ಪತ್ರ ಮತ್ತು ಮಾರಾಟವಾಗದೇ ಉಳಿದಿರುವ ಸರಕಿನ ಬಗ್ಗೆ ಮಾಹಿತಿ ದೊರಕಿಸಿಕೊಟ್ಟು, ನಂತರ ಸಂಪೂರ್ಣವಾಗಿ ತಾನು ಹಿಂದೆ ಸರಿದುಬಿಡುವುದು! ನಂತರ ಈ ಏಜೆನ್ಸಿಗಳು ಸಂಸ್ಥೆಯ ಸಕಲ ಚರಾಚರ(!) ವಸ್ತುಗಳ ಬೆಲೆಯ ಅಂದಾಜಿನಲ್ಲಿ ತನ್ನ ಲಾಭಾಂಶವನ್ನು ಮುರಿದುಕೊಂಡು ನಂತರ ಆ ಮಳಿಗೆಯ ಚಿಕ್ಕ ವಸ್ತುವೂ ಸೇರಿದಂತೆ ಈ ರೀತಿಯ ಅಖಂಡ ರಿಯಾಯಿತಿ ಮಾರಾಟವೊಂದನ್ನು ಏರ್ಪಡಿಸುವುದು!

ಮುಂದಿಂದೆಲ್ಲಾ ನಾವು ಕಣ್ಣಾರೆ ಕಂಡ ಹಾಗೇ. ಆದ್ದರಿಂದಲೇ ಸಂಸ್ಥೆಯ ಸಮವಸ್ತ್ರ ಧರಿಸಿದ್ದರೂ ಅಲ್ಲಿದ್ದವರು ವಾಸ್ತವವಾಗಿ ಆ ಸಂಸ್ಥೆಗಾಗಿ ಬೆವರು ಹರಿಸಿರದ ನಿರ್ಭಾವುಕ ಮಂದಿಯೇ ಹೊರತು ಅಲ್ಲಿ ನಲವತ್ತು ವರ್ಷ ದುಡಿದ ಅನುಭವಸ್ಥರಲ್ಲ! ಅವರುಗಳು ಮೊನ್ನೆ ಮೊನ್ನೆಯವರೆಗೂ ಯಂತ್ರದ ಬಿಡಿಭಾಗದ ಮಾರಾಟದಲ್ಲಿದ್ದು ಇಂದು ಇಲ್ಲೀಗ ಪುಸ್ತಕದ ಅಂಗಡಿಯಲ್ಲಿರಬಹುದು. ಮತ್ತೆ ಕೆಲವು ವಾರಗಳ ನಂತರ, ಯಾವುದೋ ಚೈನ್ ಹೋಟೆಲೋ, ಕಾರ್‌ಫ್ಯಾಕ್ಟರಿಯೋ ಅಥವಾ ಕಂಪ್ಯೂಟರ್ ಸೂಪರ್ ಸ್ಟೋರೋ ಅನ್ನೋ ಹಾಗೆ ಮತ್ತಿನ್ಯಾವ್ದೋ ಡಿಸ್ ಟ್ರೆಸ್ ಸೇಲಿನ ಕೆಲಸಕ್ಕೆ ಹೋಗಬೇಕಾಗಬಹುದು! ಅದಷ್ಟೇ ಅವರ ಅನುಭವದ ಪರಿಮಿತಿ.

ಒಟ್ನಲ್ಲಿ, ಹೀಗೆ ರಿಯಾಯಿತಿಯನ್ನು ಕ್ರಮೇಣ ಹೆಚ್ಚಿಸುವುದರಿಂದ ಜನರನ್ನು ಆಕರ್ಷಿಸಿ, ಪೂರ್ತಿಯಾಗಿ ಎಲ್ಲವನ್ನೂ ಕೊಂಡು ಸಾಗಿಸುವಂತೆ ನೋಡಿಕೊಂಡು, ತನ್ನ ಗಿರಾಕಿಯಾದ ಸಂಸ್ಥೆಯನ್ನು ಆದಷ್ಟು ನಿರಾಯಾಸವಾಗಿ ದಿವಾಳಿಯತ್ತ ನಡೆಸುವುದು ಇಂಥಾ ಲಿಕ್ವಿಡೇಶನ್ ಗ್ರೂಪುಗಳ ಜವಾಬ್ದಾರಿ! ಇವೆಲ್ಲಾ ನಾವು ಮನೆಗೆ ಹಿಂದಿರುಗುವಾಗ ಮಗನಿಂದ ತಿಳಿದ ವಿವರಗಳು.

ನಮ್ಮ ಕಳೆದ ಭೇಟಿಯ ನಾಲ್ಕು ದಿನಗಳ ನಂತರದ ಸುದ್ದಿಯ ಪ್ರಕಾರ Bordersನಲ್ಲಿ 70,80,90 ಪರ್ಸೆಂಟಿನ ಕೊನೆಯ ವಾರದ ರಿಯಾಯಿತಿ ಪ್ರಾರಂಭವಾಯಿತು. ಛೇ, ದೇಶದಾದ್ಯಂತ ಅದರ ನಾನೂರು ಮಳಿಗೆಗಳಲ್ಲಿ ಜರುಗುತ್ತಿರುವ, ಸುಮಾರು ಹನ್ನೊಂದು ಸಾವಿರ ಮಂದಿ ಕೆಲಸ ಕಳೆದುಕೊಳ್ಳುತ್ತಿರುವ ಈ ವ್ಯಸನಕರ ಪ್ರಕ್ರಿಯೆಯ ಅಗಾಧತೆಯೇ ಎಂಥವರ ಮನಸ್ಸನ್ನೂ ತಲ್ಲಣಗೊಳಿಸುವಂಥದ್ದಲ್ವೇ!....



ಇಂದಿನ ಎಲೆಕ್ಟ್ರಾನಿಕ್ ಯುಗದ ''ಕಿಂಡಲ್'', ''ಐಪ್ಯಾಡ್''ನಂಥಹ ಈ ಪುಸ್ತಕಗಳನ್ನು ಖರೀದಿಸಬಹುದಾದ ಸೌಲಭ್ಯವನ್ನು ನೀಡುತ್ತಿರುವ ಅಮೆಜಾನ್ ಇತ್ಯಾದಿ ಆನ್ಲೈನ್ ಮಳಿಗೆಗಳು ಮತ್ತು ಕುಸಿದಿರುವ ಇಲ್ಲಿಯ ಆರ್ಥಿಕ ವ್ಯವಸ್ಥೆ – ಇವುಗಳನ್ನು ತಮ್ಮ ಈ ವಿಷಯ ಪರಿಸ್ಥಿತಿಗಾಗಿ ಬೆಟ್ಟು ತೋರಿಸಿ ಆಪಾದಿಸಿರುವ Bordersನ ಅಧ್ಯಕ್ಷರ ನೊಂದ ನುಡಿಗಳು ಹಾಗೂ ಇಂಥಹ ವಿದ್ಯಮಾನವೊಂದರಿಂದ ಪುಸ್ತಕ ಪ್ರಿಯರ ನೆಚ್ಚಿನ ಮಾಯಾ ಪ್ರಪಂಚವೊಂದು ಕಾಣೆಯಾಗುತ್ತಿರುವುದರ ಬಗ್ಗೆ ಅದರ ಅಭಿಮಾನಿಗಳು ವ್ಯಕ್ತಪಡಿಸುತ್ತಿರುವ ದುಃಖ ಕಳವಳಗಳ ನೆನಪಿನಿಂದ ದೃಷ್ಟಿ ಮಂಜಾಗಿದೆ.

ಇಲ್ಲಿಯ ಈ ರಿಸೆಶನ್ನಿನಲ್ಲಿ ಇಂಥಾವೆಷ್ಟೋ ನಡೆದಿದ್ದರೂ ಈ ಪ್ರಸಂಗವನ್ನು ನಾನು ಪ್ರತ್ಯಕ್ಷವಾಗಿ ಕಂಡು ಅನುಭವಿಸಿದ್ದರಿಂದಲೋ ಏನೋ, ಗತಕಾಲದ ವೈಭವಕ್ಕೆ ಶಾಶ್ವತವಾಗಿ ಸರಿದ ಬೆಂದ ಮನೆಯೊಂದು, ಅಮೇರಿಕಾ ಸ್ಟೈಲಿನಲ್ಲಿ ಹಿರಿಯಲ್ಪಟ್ಟ ಈ ದುರಂತ ನಾಟಕಕ್ಕೆ ತೆರೆ ಬಿದ್ದಿದ್ದನ್ನು ನೋಡಿ ಮನಸ್ಸು ಮುದುಡಿದೆ.


*

## ಮುಂಬಯಿ ವರದಿ

ಕಳೆದ ತಿಂಗಳು ಮುಂಬೈನಲ್ಲಿ ನಡೆದ ಅದ್ದೂರಿ ಗಣೇಶನ ಹಬ್ಬದ ಸಮಯದಲ್ಲಿ ಎರಡು ಅದ್ದೂರಿ ಮಂಟಪಗಳಿಗೆ ಭೇಟಿ ನೀಡಿದ ಕುನಿಲ್ ವಿಜಯಕರ್ ಎಂಬುವರು ಈ ವರದಿ ಕಳಿಸಿದ್ದಾರೆ.

**ಮಂಟಪ ೧** – ಈ ಮಂಟಪದಲ್ಲಿ ಎಲ್ಲವೂ ನಿಶ್ಯಬ್ಧ. ಸಂಗೀತವಿಲ್ಲ, ಭಜನೆ ಇಲ್ಲ. ಕಿವಿಗಡಚಿಕ್ಕುವಂತಹ ಸೈಲೆನ್ಸ್. ಈ ಮಂಟಪವನ್ನು ಕಾಂಗ್ರೆಸ್ ಪಕ್ಷ ಪ್ರಾಯೋಜಿಸಿದ್ದು ಇದನ್ನು ಮನಮೋಹನ ಸಿಂಗ್ ಅವರಿಗೆ ಅರ್ಪಿಸಿದ್ದು ಸರಿಯಾಗಿಯೇ ಇತ್ತು.

**ಮಂಟಪ ೨** – ಇದು ಕರ್ನಾಟಕ ಸಂಘ ಗಣೇಶ ಮಂಡಲಿ ಪ್ರಾಯೋಜಿಸಿದ್ದ ಮಂಟಪ. ಕೊನೆಯ ದಿನ ವಿಸರ್ಜನೆಯ ಸಮಯದಲ್ಲಿ ಮೆರವಣಿಗೆಯ ಸಮಯದಲ್ಲಿ ಇತರರೆಲ್ಲರೂ 'ಗಣಪತಿ ಬಪ್ಪ' ಎಂದು ಕೂಗುತ್ತಿದ್ದರೆ ಈ ಸಂಘದವರು 'ಯಡ್ಯೂ–ರಪ್ಪ' ಎಂದು ಕೂಗುತ್ತಾ ವಿಗ್ರಹವನ್ನು ನೀರಿನಲ್ಲಿ ಮುಳುಗಿಸಿದರು.




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year
on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**






# ಸಾವಿರ ಮುಖಗಳು....

**- ಎಚ್. ಗೋಪಾಲಕೃಷ್ಣ**

**ನ**ಮ್ಮ ರಸ್ತೆಯಲ್ಲಿ ಒಂದು ದೊಡ್ಡ ಕಟ್ಟಡದ ಕೆಲಸ ಸುಮಾರು ದಿವಸದಿಂದ ನಡೀತಿದೆ. ಈಗ ಅದರ ಮುಕ್ತಾಯದ ಹಂತ, ಮನೆಗೆ ಬಣ್ಣ ಬಳಿಯಲು ಕೆಲವರು ಹುಡುಗರು ಬಂದರು. ನಮ್ಮ ಮನೆಯ ಮುಂದೆಯೇ ಅವರು ಹಾದು ಹೋಗುವುದು, ಆಗಾಗ ನೀರಿಗಾಗಿ ಬರುವುದು, ಈ ಸಮಯದಲ್ಲಿ ಮಾತುಕತೆಯಾಡುವುದು. ಇದರಿಂದ ಅವರ ಪರಿಚಯವಾಯಿತು. ಮೊದಮೊದಲು ನಮಸ್ತೆಗೆ ಮಾತ್ರ ಸೀಮಿತವಾಗಿದ್ದ ಅವರ ಸಂಗಡದ ಸಂಭಾಷಣೆ ದಿನಕಳೆದಂತೆ ಅವರ ಊರು, ಅವರು ಹುಟ್ಟಿಬೆಳೆದ ವಾತಾವರಣ, ಊರಿನಲ್ಲಿ ಅವರ ಆಸ್ತಿ ಪಾಸ್ತಿ ಈ ರೀತಿಯ ವಿಷಯಗಳಿಗೆ ಹಬ್ಬಿತು. ಆರು ಜನರ ಹುಡುಗರ ಗುಂಪು ಇದು. ಅವರಲ್ಲಿ ಮಿಕ್ಕವರಿಗಿಂತಲೂ ಕೊಂಚ ದೊಡ್ಡವನಂತೆ ಕಾಣುತ್ತಿದ್ದವನು ಅವರಿಗೆ ಲೀಡರಿನ ರೀತಿ ಕಾಣುತ್ತಿದ್ದ. ಮಿಕ್ಕವು ಅವನನ್ನು ಭಾಯೀ ಭಾಯೀ ಅಂತ ಕರೆದುಕೊಂಡು ಕೆಲಸ ಮಾಡುತ್ತಿದ್ದವು. ಈ ಲೀಡರು ಮಿಕ್ಕವರಿಗೆ ಕೆಲಸದ ಬಗ್ಗೆ ವಿವರ ನೀಡುವುದು, ಹಣ ನೀಡುವುದು, ಅವರನ್ನು ಹೋಟಲು ಸಿನಿಮಾಗಳಿಗೆ ಒಯ್ಯುವುದು ಮಾಡುತ್ತಿದ್ದ. ಅಂದರೆ ಒಂದು ರೀತಿಯಲ್ಲಿ ಹಿರಿಯಣ್ಣನ ಪಾತ್ರಧಾರಿ ಎಂದೇ ಹೇಳಬಹುದು. ಮಿಕ್ಕವರೆಲ್ಲರೂ ಇಪ್ಪತ್ತು ಇಪ್ಪತ್ತೆರಡರ ಗುಂಪಿನವರಾದರೆ ಇವನಿಗೆ ಒಂದು ಒಂದಾರು ವರ್ಷ ಹೆಚ್ಚೇ ಹೇಳಬಹುದು ಹಾಗಿದ್ದ.

ಮೊನ್ನೆ ಭಾನುವಾರ ಮನೆಯಲ್ಲಿಯೇ ಇದ್ದೆ. ರಸ್ತೆಯಲ್ಲಿ ಹೋಗುತ್ತಿದ್ದ ಗುಂಪು ನನ್ನನ್ನು ನೋಡಿ ಮಾತಿಗೆ ನಿಂತಿತು. ಲೀಡರು ಮಾತಿನ ಮಧ್ಯೆ ಅವನ ಊರಿನ ಕಥೆಯನ್ನೂ ಅವನ ಪಟಾಲಮ್ಮಿನ ಕತೆಯನ್ನೂ ವಿವರಿಸಿದ.

ಇವರ ಊರು ಬಿಹಾರದಲ್ಲಿನ ಯಾವುದೋ ಪುಟ್ಟ ಹಳ್ಳಿಯಂತೆ. ಹಳ್ಳಿಯಲ್ಲಿ ಇವನ ತಂದೆ ಕೊಂಚ ಸಾಹುಕಾರರು, ಮನೆಯಲ್ಲಿ ಕೆಲಸಕ್ಕೆ ಎಂದು ಆಳುಕಾಳುಗಳನ್ನು ಇಟ್ಟುಕೊಂಡು ಜಮೀನು ಸಾಗುವಳಿ ನಡೆಸುತ್ತಾ ಇತರರಿಗಿಂತ ಮೇಲ್ಮಟ್ಟದ ಜೀವನ ಸಾಗಿಸುತ್ತಿದ್ದಾರೆ. ಹಳ್ಳಿಯಲ್ಲಿ ಕಿತ್ತು ತಿನ್ನುವ ಬಡತನದ ಜತೆಗೆ ಕುಟುಂಬಗಳ ನಡುವೆ ಮುಗಿಯದ ವೈಷಮ್ಯವಂತೆ. ದೊಡ್ಡವನು ಬಿಎ ಕಲಿಯುತ್ತಿದ್ದನಂತೆ. ಇವನಿಗೆ ಮೂರು ತಂಗಿಯರು. ಅವರೂ ಸಹ ಹೈಸ್ಕೂಲಿನಿಂದ ಪೀಯೂಸಿವರೆಗೆ ಬೇರೆ ಬೇರೆ ತರಗತಿಗಳಲ್ಲಿ ವ್ಯಾಸಂಗ ನಡೆಸುತ್ತಿದ್ದಾರೆ. ಎಲ್ಲವೂ ಸರಿಯಿದ್ದರೆ ಇವನ ಬಿಎ ಮುಗಿದು ಈ ವೇಳೆಗೆ ಮದುವೆಯಾಗಬೇಕಿತ್ತು. ಆದರೆ ಇವರ ಮನೆಗೆ ಕೆಲಸಕ್ಕೆ ಅಂತ ಬರುತ್ತಿದ್ದ ಹುಡುಗ ಇವನ ಮೊದಲ ತಂಗಿಯನ್ನು ಪ್ರೀತಿಸಿದ. ತಂಗಿಯೂ ಅವನನ್ನು ಇಷ್ಟ ಪಟ್ಟಳು. ಇಬ್ಬರದ್ದೂ ಒಂದೆ

ಪಂಗಡವಾದರೂ ಸಾಮಾಜಿಕ ಹಂತಕ್ಕೆ ಅತಿ ಪ್ರಾಮುಖ್ಯವಿರುವ ಸಮಾಜದಲ್ಲಿ ಇವರಿಬ್ಬರ ನಡುವೆ ಮದುವೆ, ಹುಡುಗಿಯ ತಂದೆ ಒಪ್ಪದೆ ಸಾಧ್ಯವಾಗದೆಂಬ ಅರಿವು ಇಬ್ಬರಿಗೂ ಇತ್ತು. ಸಮಸ್ಯೆ ಪರಿಹಾರಕ್ಕೆ ಅವರಿಗೆ ಕಾಣಿಸಿದ್ದು ಒಂದೇ ದಾರಿ – ಸಾವಿಗೆ ಶರಣಾಗುವುದು! ಇದು ಅವರು ಮಾತನಾಡುತ್ತಿರುವಾಗ ಕೇಳಿಸಿಕೊಂಡ ಇವರ ಗುಂಪಿನ ಕಿರಿಯ, ದೊಡ್ಡವನಿಗೆ ವಿಷಯ ಮುಟ್ಟಿಸಿದ. ತಂದೆ ಎದುರು ನಿಂತು ಈ ಸಂಗತಿ ಚರ್ಚಿಸುವುದು ಇವನಿಗೂ ಸಾಧ್ಯವಾಗಲಿಲ್ಲವಂತೆ. ಇವನ ಹತ್ತಿರ ಸಾಕಷ್ಟು ಹಣವಿಲ್ಲವೆಂದೆ ಮದುವೆಗೆ ಹಿರಿಯರ ಒಪ್ಪಿಗೆ ಸಿಗದಿರಬಹುದು ಎಂಬುವ ಕಾರಣ ಹುಡುಕಿದ ಇವನು ಒಂದು ಪರಿಹಾರ ಹುಡುಕಿದ. ಪ್ರೀತಿಗೆ ಸಿಕ್ಕಿರುವ ಆ ಹುಡುಗನನ್ನೂ ಸೇರಿಸಿದ ಹಾಗೆ ಮಿಕ್ಕ ಹುಡುಗರನ್ನೂ ಸೇರಿಸಿಕೊಂಡು ಹಳ್ಳಿಯಿಂದ ಪರಾರಿಯಾಗುವುದು, ಒಂದೆರೆಡು ವರ್ಷದಲ್ಲಿ ಹುಡುಗನಿಗೆ ಒಂದು ನೆಲೆ ಕಲ್ಪಿಸುವುದು, ನಂತರ ಜೋಡಿಯನ್ನು ಸೇರಿಸುವುದು.

ಸಿನಿಮಾ ಕತೆಯೆನಿಸಿದರೂ ಅವನ ಯೋಚನೆ ನನಗೆ ವಿಚಿತ್ರ ಅನಿಸಿತು.

ಅಲ್ಲಾ, ನೆಲೆ ಕಂಡುಕೊಡ್ತೀಯಾ, ಆಗಲೂ ನಿಮ್ಮ ತಂದೆ ಮದುವೆಗೆ ಒಪ್ಪಲ್ಲ ಅಂದರೆ.

ನೆಲೆ ಮಾಡಿಕೊಡುವ ಉದ್ದೇಶವೇ ಅದು ಸಾರ್, ಅವರು ಮದುವೆಗೆ ಒಪ್ಪಿಗೆ ಕೊಡಲ್ಲ ಅಂದರೆ ತಂಗೀನ ಸೀದಾ ಇಲ್ಲೀಗೆ ಕರೆದುಕೊಂಡು ಬಂದು ಮದುವೆಮಾಡೋದು ಅಂತ.

ಅದು ಸರೀಪ್ಪಾ, ನೀವು ಇಲ್ಲಿರಬೇಕಾದರೇನೇ ಹುಡುಗೀಗೆ ಅಲ್ಲಿ ನಿಮ್ಮ ತಂದೆ ಮದುವೆ ಮಾಡಿಬಿಟ್ಟರೆ?

ಅದಕ್ಕೆ ತಕ್ಕ ಏರ್ಪಾಟು ಮಾಡಿದೀನಿ ಸಾರ್. ಅಲ್ಲಿ ಮದುವೇಗೆ ಪ್ರಯತ್ನ ನಡೆಸಬೇಕಾದರೇನೆ ಇಲ್ಲಿ ನನಗೆ ಸಂಗತಿ ಮುಟ್ಟುವ ಹಾಗೆ ಸ್ನೇಹಿತರನ್ನ ಇಟ್ಟಿದ್ದೀನಿ.

ಅದೂ ಸರಿ ಅನ್ನು, ಹುಡುಗ ಇಲ್ಲಿ ಮತ್ತೆ ಯಾರನ್ನೋ ಪ್ರೀತಿಸಿಬಿಟ್ಟರೆ ಏನು ಮಾಡ್ತೀಯಾ?

ಅದೇನೋ ಸಂಶಯಾತ್ಮಾ ವಿನಶ್ಯತಿ ಅಂತ ಗೀತೆ ಮಾತಿದೆಯಂತೆ. ನನಗೆ ಯಾರಾದರೂ ಇಂತಹ ವಿಷಯ ಹೇಳಿದಾಗ ತಲೆ ತುಂಬಾ ಸಮಸ್ಯೆಗಳು ಹುಟ್ಟಿಬಿಡುತ್ತೆ!

ಸಾರ್ ಅದನ್ನೂ ಯೋಚನೆ ಮಡಿದ್ದೀನಿ. ಇವರ ಪ್ರೀತಿ ಗಟ್ಟಿ

ಅಂದಮೇಲೇನೆ ಈ ತೀರ್ಮಾನ ತೆಗೆದುಕೊಂಡಿದ್ದು, ಅಲ್ಲದೇ ನಿಮ್ಮೂರು ಅಂದರೆ ಎಂಥಹ ಆಕರ್ಷಣೆ ಇರೋ ಜಾಗ ಅಂತಲೂ ಗೊತ್ತು. ಇವನನ್ನ ಕಾವಲು ಕಾಯೋದಕ್ಕೇ ಅಂತಲೆ ಮೂರುಜನ ಅವನ ಸ್ನೇಹಿತರನ್ನೂ ಕರೆದುಕೊಂಡು ಬಂದಿರೋದೂ.

ಅದು ಸರಿ. ಆದರೆ ಅಲ್ಲಿ ನಿನ್ನ ತಂಗಿ ಇನ್ನ್ಯಾರನ್ನೋ ಪ್ರೀತಿಸಿಬಿಟ್ಟರೆ ಏನ್ಮಾಡ್ತೀಯಾ?

ನೀವು ಹೇಳ್ತಿರೋದು ಇಲ್ಲೀಗೆ ಬಂದಮೇಲೆ ಹೊಳೀತು, ಅದಕ್ಕೇ ಅಲ್ಲಿ ಅವಳ ಮೇಲೂ ಒಂದು ಕಣ್ಣು ಹಾಕಿಸಿದ್ದೀನಿ... ಅಂದ!

ಪ್ರೀತಿಗೆ ಸಾವಿರ ಮುಖಗಳು ಅಂತ ಓದಿದ್ದೆ ಅದನ್ನ ಕಾಪಾಡುವುದಕ್ಕೂ ಅಷ್ಟೇ ಮುಖಗಳು ಅಂತ ಗೊತ್ತಿರಲಿಲ್ಲ! *





# ಸೇವಕರೇ ಮಾಲೀಕರಾದಾಗ

**ಸಂದರ್ಶಿಸದೆ ಬರೆದವರು:ಆನಂದ**

**ಮೊ**ನ್ನೆ ಹೆಸರಾಂತ ಪತ್ರಕರ್ತ ಜಗ್ ಸುರೈಯಾ ಸಿಕ್ಕಿದ್ದರು.

ಜಗ್ ಸುರೈಯಾ 'ಟೈಂಸ್ ಆಫ್ ಇಂಡಿಯಾ' ಓದುಗರಿಗೆ ಚಿರಪರಿಚಿತ. ನಮ್ಮ ಮಾತು ಸಹಜವಾಗಿ ಅಣ್ಣಾ ಹಜಾರೆ ನಡೆಸಿದ, ನಡೆಸಲಿರುವ ಚಳವಳಿಯತ್ತ ತಿರುಗಿತು.

ನಿಮ್ಮ ಅನಿಸಿಕೆ ಏನು? ಎಂದು ಕೇಳಿದೆ.

ರಾಜಕಾರಣವನ್ನು ವೃತ್ತಿ ರಾಜಕಾರಣಿಗಳಿಗೇ ಬಿಡುವುದು ತುಂಬಾ ಅಪಾಯಕಾರಿ ಎಂದು ನಮಗೀಗ ಮನದಟ್ಟಾಗಬೇಕಿದೆ ಎಂದರು ಜಗ್.

'ಅಪರಂಜಿ' ಓದುಗರಿಗಾಗಿ ಸ್ವಲ್ಪ ವಿವರಿಸಿ ಸಾರ್ ಎಂದೆ ನಿಮ್ಮೆಲ್ಲರ ಪರವಾಗಿ.

ನೋಡಿ, ಜನ ನಮ್ಮ ದೇಶವನ್ನು ಒಂದು ಮನೆ ಎಂದು ಭಾವಿಸಿದ್ದಾರೆ. ಅಲ್ಲವೆ?

ಹೌದು.

ಆದರೆ ಆ ಮನೆಯ ಮೇಲಿನ ನಿಗಾವನ್ನು ಅವರು, ಅಂದರೆ ಮಾಲೀಕರು, ಸೇವಕರಿಗೆ ವಹಿಸಿದ್ದಾರೆ. ಸೇವಕರೇ ದಿನನಿತ್ಯದ ಆಗುಹೋಗುಗಳಿಗೆ ಜವಾಬ್ದಾರಿ. ಅವರೇ ಸಾಮಾನು ತರುತ್ತಾರೆ, ಅವರೇ ಕ್ಲೀನ್ ಮಾಡುತ್ತಾರೆ. ಲೆಕ್ಕ ಅವರೇ ಇಡುತ್ತಾರೆ. ಮನೆ ಮಾಲೀಕರು ಐದು ವರ್ಷಗಳಿಗೊಮ್ಮೆ ಒಂದು ಬಾರಿ ವಿಚಾರಿಸಿಕೊಳ್ತಾರೆ ಅಷ್ಟೆ ಹೌದಲ್ಲವೆ?

ಹೌದು ಎಂದು ಒಪ್ಪಿಕೊಂಡೆ.

ಆದುದರಿಂದ ಈ ಸೇವಕರು ತಾವೇ ಮನೆ ಮಾಲೀಕರು ಎಂದು ಭಾವಿಸಿದ್ದಾರೆ. ಈಗವರು ಸೋಮಾರಿಗಳಾಗಿದ್ದಾರೆ. ಮಾಲೀಕರಿಗೆ ಏನೂ ಮರ್ಯಾದೆ ಕೊಡುವುದಿಲ್ಲ, ಸರಿಯಾದ ನಿಗಾ ಇಲ್ಲದೆ ಮನೆ ಶಿಥಿಲಗೊಳ್ಳುತ್ತಿದೆ.

ನೀವು ಹೇಳೋದು ನಿಜ ಎಂದು ಇನ್ನೊಮ್ಮೆ ತಪ್ಪೊಪ್ಪಿಕೊಂಡೆ.

ಈಗ ಈ ಮಾಲೀಕರು ಏನು ಮಾಡ್ತಿದ್ದಾರೆ?

ಏನು ಸಾರ್?

ಸೇವಕರನ್ನು ಬಯ್ತಿದ್ದಾರೆ. ನಮಗೆ ಮೋಸ ಮಾಡಿದ್ದಾರೆ. ಧೋಕ ಹಾಕಿದ್ದಾರೆ ಎಂದೆಲ್ಲ ಗೋಳಾಡ್ತಿದ್ದಾರೆ.

ಅದು ಸಹಜವೇ ನಾನೆಂದೆ.

ಅಷ್ಟೇ ಅಲ್ಲ, ಎಲ್ಲಾ ಸೇವಕರು ಮೋಸಗಾರರು. ಯಾರನ್ನೂ ನಂಬಲು ಸಾಧ್ಯವೇ ಇಲ್ಲ ಎಂದೂ ಹಲಬುತ್ತಿದ್ದಾರೆ.

ಹಾಗೆನ್ನಿಸುವುದು ಸಹಜವೇ ಅಲ್ಲವೆ ಸಾರ್? ಎಂದು ಕೇಳಿದೆ.

ಆದರೆ ಮೈ ಡಿಯರ್ (ಯಂಗ್?) ಮ್ಯಾನ್, ಮಾಲೀಕರು ಅವರ ಜವಾಬ್ದಾರಿಯನ್ನು ಮರೆತಿದ್ದಕ್ಕೆ ತಾನೆ ಈ ಪರಿಸ್ಥಿತಿ ಉದ್ಭವಿಸಿದ್ದು? ಎಂದು ಜಗ್ ಕೇಳಿದರು.

ಯಾವ ಜವಾಬ್ದಾರಿ ಸಾರ್?

ಅದೇರಿ ಸೇವಕರ ಮೇಲೆ ನಿಗಾ ಇಡುವುದು? ಇಡೀ ಮನೆ ಹೊಣೇನ ಸೇವಕರ ಮೇಲೆ ಇರಿಸಿ ಸುಮ್ಮನಿದ್ದು ಬಿಟ್ಟರೆ ಹೇಗೆ?

ಏನೋ ಅವರನ್ನು ನಂಬಿದ್ದರಲ್ಲಾ ಸಾರ್.

ಬರೀ ನಂಬಲಿಲ್ಲ. ತುಂಬಾ ನಂಬಿದರು. ಅತಿ ನಂಬಿಕೆ ಅದೇ ಸಮಸ್ಯೆ ಆಗಿದ್ದು. ಅದಕ್ಕೆ ಸೇವಕರೇನು ಮಾಡಿದರು? ಹೇಗೋ ನಮ್ಮ ಮೇಲೆ ನಿಗಾ ಇಲ್ಲ. ನಾವು ಹೇಗೆ ಬೇಕೋ ಹಾಗೆ ಇರೋಣ ಎಂದು ಭಾವಿಸಿದರು. ಹಾಗೇ ಇದ್ದರು. ಭಾರತ ಎಂಬ ನಮ್ಮ ಮನೆ ಲೂಟಿ ಆಗ್ತಾ ಇರೋದಕ್ಕೆ ಕಾರಣ ಇದೇ ಅಲ್ಲವೆ?

ಅಂದರೆ ನಾವೇ ಸೇವಕರೂ ಆಗಬೇಕೆ ಸಾರ್?

ಛೆ ಎಲ್ಲರೂ ಸೇವಕರಾಗಲು ಸಾಧ್ಯವಿಲ್ಲ. ಅದು ನನಗೂ ಗೊತ್ತುರೀ. ಆದರೆ ಸೇವಕರ ಮೇಲೆ ನಿಗಾ ಇಡಬೇಕು ಎಂದು ನಾವು ತಿಳಿಯಬೇಕಲ್ಲವೆ?

ಅದೇ ಅಲ್ಲವಾ ಸಾರ್ ಅಣ್ಣಾ ಹಜಾರೆ ಅವರು ಹೇಳ್ತಾ ಇರೋದು?

ಈಗಲಾದರೂ ನಿಮಗೆ ಹೊಳೀತಲ್ಲ ಎಂದು ಸಂತಸಪಟ್ಟರು ಜಗ್ ಸುರೈಯಾ.

*

### ಏನು ಮಾಡ್ತಿದ್ದರು?

ನಾವು ಚಿಕ್ಕವರಿದ್ದಾಗ...

ಅನೇಕ ಪ್ರತಿಭಾವಂತರು ಬೀದಿ ದೀಪದ ಕೆಳಗೆ ಓದುತ್ತಿದ್ದರು; ಕ್ಯಾಂಡಲ್ ದೀಪ ಹಚ್ಚಿಕೊಂಡು ಅಭ್ಯಾಸ ಮಾಡುತ್ತಿದ್ದರು; ಕೆಲವರು ಸೀಮೆ ಎಣ್ಣೆ ಬುಡ್ಡಿ ಬೆಳಕಿನಲ್ಲಿ ಓದಿ ದೊಡ್ಡ ಮನುಷ್ಯರಾದರು; ಗೆಲಿಲಿಯೊ ಚಂದ್ರನ ಬೆಳಕಿನಲ್ಲಿ ಓದ್ತಾ ಇದ್ದ...

ಎಂದೆಲ್ಲ ನಮಗೆ ಹೇಳಿದ್ದರು. ಅವರಿಗೆಲ್ಲ ನಮೋ ನಮಃ.

ಆದರೆ ನನ್ನ ಪ್ರಶ್ನೆ ಏನೆಂದರೆ 'ಅವರೆಲ್ಲಾ ಹಗಲು ಹೊತ್ತು ಏನು ಮಾಡ್ತಿದ್ದರು?'

- ತ.ಲೆ. ಹರಟೆ



# ಅಕ್ಟೋಬರ್ 2011

- ಜ್ಯೋತಿಷಿ ಸತ್ಯೋತ್ತಮಾಚಾರ್ಯ

**ಮಾಸ ಸೂಕ್ತಿ:** ''ನಿನ್ನ ನಾಮದ ಬಲವೊಂದಿದ್ದರೆ ಸಾಕೋ'' ಅಂತ ದಾಸರು ಹಾಡಿದ್ದಾರೆ. ಆದರೆ, ನಾನು ಅದಕ್ಕೆ ''ನನಗೆ ಸಂಖ್ಯೆಯ ಬಲವೂ ಕೊಡು ಹರಿಯೇ!'' ಎನ್ನುತ್ತೇನೆ. ನಿಮ್ಮ ಅದೃಷ್ಟ ಸಂಖ್ಯೆಗಳ ಕಡೆ ಗಮನವಿಟ್ಟರೆ, ದೇವರು ನಿಮಗೆ ಒಳ್ಳೆಯದು ಮಾಡಲಿ!

**ಮೇಷ:** ಅ.ಸ. (ಅಂದರೆ ಅದೃಷ್ಟ ಸಂಖ್ಯೆಗಳು): (3,5,12) ಗಂಡಸರಾದರೆ 3 ಹೆಂಡತಿಯರು ಲಭ್ಯ – ಹಾಗಿದ್ದಲ್ಲಿ 5 ಮಕ್ಕಳೂ ಲಭ್ಯ, 12 ಸೈಟ್‌ಗಳ ಮಾಲೀಕರಾಗಬಹುದು, ಹೆಂಗಸರಾದರೆ ಬೇನಾಮಿ ಜಮೀನುಗಳು, 5 ವಜ್ರದ ಸೆಟ್‌ಗಳು, 12 ಬ್ಯಾಂಕ್ ಅಕೌಂಟ್‌ಗಳ ಯೋಗವಿದೆ.

**ವೃಷಭ:** ಅ.ಸ.: (2,7,9,6) ಇತ್ತೀಚೆಗೆ ಮದುವೆಯಾಗಿದ್ದರೆ ಎರಡು ಮಕ್ಕಳನ್ನು ಪಡೆಯುವ ಭಾಗ್ಯವಿದ್ದು, ಮೊದಲನೆಯದು ಏಳು ತಿಂಗಳಿಗೇ ಆಗಮನ; ಇನ್ನೊಂದು 9 ತಿಂಗಳಿಗೆ ನಿಧಾನವಾಗಿ ಬರಲಿದೆ. ಅತ್ತೆ ಮಾವರನ್ನು ಸೇರಿಸಿಕೊಂಡು 6 ಬೆಡ್‌ರೂಮ್ ಮನೆಯನ್ನು ಹೊಕ್ಕು ಶಾಂತವಾಗಿರುತ್ತೀರಿ.

**ಮಿಥುನ:** ಅ.ಸ.: (2,3,5,6) ಎಸ್.ಎಸ್.ಎಲ್.ಸಿ., ಪಿಯೂಸಿ, ಡಿಗ್ರಿ, ಸ್ನಾತಕೋತ್ತರ ಡಿಗ್ರಿಗೆ ಕ್ರಮವಾಗಿ 2,3,5,6 ಸಾರಿ ಕುಳಿತು ಉತ್ತೀರ್ಣರಾಗದಿದ್ದರೂ, ಆ ಅನುಭವದಿಂದ ಜೀವನದಲ್ಲಿ ಪರಿಪಕ್ವವಾಗಿ ಹಾಯಾಗಿ ಸಂಸಾರ ನಡೆಸುತ್ತೀರಿ. ಪ್ರೈವೇಟ್ ಕಾಲೇಜುಗಳಲ್ಲಿ ಪ್ರೊಫೆಸರ್ ಹುದ್ದೆಗೇರುವುದು ಅಥವಾ ವಿದ್ಯಾ ಇಲಾಖೆ ಮಂತ್ರಿ(ಣಿ) ಆಗುವ ಯೋಗವಿದೆ. ಅಭಿನಂದನೆಗಳು!

**ಕಟಕ:** ಅ.ಸ.: (1,2,4) ಮನೆಯಲ್ಲಿ 1 ಹೆಂಡತಿ ಅಥವಾ ಗಂಡ 2 ಮಕ್ಕಳು, 4 ಕಾರುಗಳು ಇದ್ದು 'ಚಿಕ್ಕ ಸಂಸಾರ ಚೊಕ್ಕ ಸಂಸಾರ'ವೆಂಬ ನಾಣ್ಣುಡಿಗೆ ಪ್ರತೀಕಾರವಾಗಿರುತ್ತೀರಿ. ಕೆಲವೊಮ್ಮೆ ಕೆಲವರಿಗೆ ಇದು 4 ನಾಯಿಗಳು, 2 ಮಕ್ಕಳು, 1 ಹೆಂಡತಿ ಅಥವಾ ಗಂಡನಾಗಿ ಪರಿವರ್ತನೆಯಾಗಬಹುದು ಕಚ್ಚೋನಾಯಿಗಳಾದರೆ ಹುಷಾರಾಗಿರಿ.

**ಸಿಂಹ:** ಅ.ಸ.: (3,9, 12) ನಿಮ್ಮ ಪ್ರವೃತ್ತಿ ಹೇಗೆಂದರೆ ಬ್ರಹ್ಮ ಸೃಷ್ಟಿಸಿದ 3 ಲೋಕಗಳಿಗೂ ನೀವೇ ಅಧಿಪತಿ ಎಂಬ ಸ್ಥೈರ್ಯದಿಂದ ಇರುತ್ತೀರಿ. ಇರಲಿ, ಇದರಿಂದ ಯಾರಿಗೂ ತೊಂದರೆ ಯೇನಿಲ್ಲ, ಬ್ಯಾಂಕಿನಲ್ಲಿ 9 ಲಕ್ಷ ರೂಪಾಯಿಗಳ ಠೇವಣಿಯನ್ನು ಇಟ್ಟರೆ, ಬಡ್ಡಿಗೆ ಮೋಸವಿಲ್ಲ, ಕ್ಯಾಲಿಫೋರ್ನಿಯಾದಲ್ಲೋ ನ್ಯೂಜರ್ಸಿಯಲ್ಲೋ ಇರುವ ನಿಮ್ಮ ಮಕ್ಕಳಿಂದಾಗಿ 12 ಬಾರಿ ಅಮೇರಿಕಾ ಯಾತ್ರೆಯನ್ನು ಬಿಟ್ಟಿ ಹೊಡೆಯಲಿದ್ದೀರಿ. Bon Voyage!

**ಕನ್ಯಾ:** ಅ.ಸ.: (1,4,8) ಸಮಾಜ ಸೇವೆಯಲ್ಲಿ ನಿಮ್ಮ ಹೆಸರು ಪ್ರಖ್ಯಾತವಾಗಲಿದ್ದು ನಿಮ್ಮ ಹೆಸರು 1 ಬಾರಿ ರಾಜ್ಯೋತ್ಸವ ಪ್ರಶಸ್ತಿಗೆ, 4 ಬಾರಿ ನಾಡೋಜ ಪ್ರಶಸ್ತಿಗೆ, 8 ಬಾರಿ ಪದ್ಮಶ್ರೀ ಪ್ರಶಸ್ತಿಗೆ ಶಿಫಾರಸ್ಸಾಗುವ ಯೋಗವಿದೆ. ಆದರೆ ಈ ಶಿಫಾರಸ್ಸು ಪತ್ರಗಳು ಪೋಸ್ಟ್‌ನಲ್ಲೇ ಕಳೆದು

ಹೋದರೂ, ನಿಮ್ಮ ಹೆಸರಂತೂ ಹತ್ತು ಜನಕ್ಕೆ ಎಂದೂ ತಿಳಿದೇ ಇರುತ್ತೆ, ನಿಮ್ಮ ಸಮಾಜ ಸೇವೆಯ ಕಾರ್ಯ ಮುಂದುವರೆಯಲಿ ಎಂದು ಹಾರೈಸುತ್ತೇವೆ.

**ತುಲಾ:** ಅ.ಸ.: (5,3,6,8) ನಿಮಗೆ 5 ಅಥವಾ ಪಂಚ ಭೂತಗಳ ರಕ್ಷಣೆ ಸದಾ ಇರುತ್ತದೆ. ಹಾಗಾಗಿ ಜೀವನ ಸುಗುಮವಾಗಿರುತ್ತೆ. ತುಲಾಗಳಿಗೆ ಸಾಹಿತ್ಯದ ಕಡೆ ವಾಲುವ ಚಿಹ್ನೆ ಇದೆ. ಹಾಗಿದ್ದಲ್ಲಿ ನಿಮ್ಮ ಬರಹಗಳು ಒಡನೆಯೇ ಪ್ರಕಟವಾಗದೆ ಮನೆಗೆ ವಾಪಸ್ ತಲುಪಿದರೂ ನಿಮ್ಮ 3ನೇ ಕತೆ, 6ನೇ ಕವಿತೆ, 8ನೇ ಕಾದಂಬರಿ, ಅಜ್ಜಿಗೆ ಹೋಗೋದಂತೂ ಗ್ಯಾರಂಟಿ. ಈ ತಿಂಗಳೂ ಹ್ಯಾಪಿ ಬರ್ತ್‌ಡೇ ತುಲಾದವರೇ !

**ವೃಶ್ಚಿಕ:** ಅ.ಸ.: (9,18,27,36,45) ನಿಮಗೂ ಹ್ಯಾಪಿ ಬರ್ತ್‌ಡೇ! ನೀವೇನಾದರೂ ಸಾಫ್ಟ್‌ವೇರ್ ಟೆಕಿ ಆಗೋ ಯೋಗದಲ್ಲಿದ್ದರೆ, 9ನೇ ವರ್ಷಕ್ಕೆ ಸ್ಕೂಲು, 18ನೇ ವರ್ಷಕ್ಕೆ ಕಾಲೇಜು, 27ನೇ ವರ್ಷಕ್ಕೆ ಮದುವೆ ಮತ್ತು ಅಮೇರಿಕಾ, 36ನೇ ವರ್ಷಕ್ಕೆ ಚೀನಾದಲ್ಲಿ ಪೋಸ್ಟಿಂಗ್, 45ನೇ ವರ್ಷದಲ್ಲಿ ವಾಲೆಂಟರಿ ರಿಟೈರ್‌ಮೆಂಟ್ ಆಗಿ ಬೆಂಗಳೂರು ದೇವನಹಳ್ಳಿ ಹತ್ತಿರ ಹಾಯಾಗಿ ಜೀವನ ನಡಿಸ್ತೀರಿ.

**ಧನಸ್ಸು:** ಅ.ಸ.: (9,8,6) ನಿಮ್ಮಲ್ಲಿ ದೈವ ದತ್ತವಾಗಿ ಸಂಗೀತ ಜ್ಞಾನವಿದೆ, ಹಾಗಾಗಿ ನಿಮ್ಮ ಜೀವನದಲ್ಲಿ ನಿಮಗೆ 9 ಸಂಗೀತ ಮೇಷ್ಟ್ರುಗಳು ನಿಮಗೆ ಸಂಗೀತ ತುಂಬಲು ಪ್ರಯತ್ನಿಸುತ್ತಾರೆ. ಕೊನೆಗೂ ನಿಮಗೆ 8 ಹಿಂದಿ ಹಾಗೂ 6 ಕನ್ನಡ ಚಿತ್ರಗೀತೆಗಳು ಮನದಟ್ಟಾಗಿ ಸ್ಕೂಲ್ ಕಾಲೇಜುಗಳಲ್ಲಿ ಬರ್ತ್‌ಡೇ ಪಾರ್ಟಿಗಳಲ್ಲಿ, ಗಣೇಶನ ಹಬ್ಬದಲ್ಲಿ ಹೇಳುವ ಸಾಧ್ಯತೆ ಇದೆ. ಅವನು ಯಾರು ಕೇಳದಿದ್ದರೂ, ನಿಮಗೆ ಈ ಪ್ರಯತ್ನದಿಂದ ಆತ್ಮವಿಶ್ವಾಸ ದೊರಕುವುದಂತೂ ಖಂಡಿತ.

**ಮಕರ:** ಅ.ಸ.: (3,8,6) ನಿಮ್ಮ ಜೀವನ ಸಂಗಾತಿಯೊಂದಿಗೆ 'ಕಂಪೆನಿ'ಗಳನ್ನು ಹೂಡಿಕೊಂಡು 'ಸಮಾಜ ಸೇವೆ' ಮಾಡುವ ಅದೃಷ್ಟ ನಿಮಗಿದೆ, ಕಷ್ಟಪಟ್ಟರೆ ನಿಮಗೆ 3 ರೋಡಿನ ಕಾಂಟ್ರಾಕ್ಟ್, 8 ಒಳಚರಂಡಿ ಕಂಟ್ರಾಕ್ಟ್, 6 ಬೇಲಿ ಕಂಟ್ರಾಕ್ಟ್, ಬಿ.ಬಿ.ಎಂ.ಪಿ.ಯಿಂದ ದಕ್ಕುವ ಅದೃಷ್ಟವಿದೆ. ಆದರೆ ಒಂದು ಮುನ್ನೆಚ್ಚರಿಕೆ, ಅಂಡರ್ ಪಾಸ್ ಕಾಂಟ್ರಾಕ್ಟ್‌ನ ಮಾತ್ರ ಕೈಗೆತ್ತಿಕೊಳ್ಳಬೇಡಿ. ನೀವು ಅಲ್ಲಿ ನಿಂತಿರುವಾಗ ಅದು ತಲೆಯ ಮೇಲೆ ಕುಸಿದು ಬೀಳುವ (ಶನಿ ಕಾಟದಿಂದ) ಸಂಭವವಿದೆ!

**ಕುಂಭ:** ಸ.ಅ.: (3,6,9,12) ನಿಮಗೂ ಶನಿ ಕಾಟ ತಪ್ಪಿದ್ದಲ್ಲ, ಆದರೂ ಸಂಖ್ಯಾ ಬಲ ನಿಮ್ಮನ್ನು ರಕ್ಷಿಸಲಿದೆ, 3 ಸ್ಕೂಲುಗಳಿಗೆ ಮಣ್ಣುಹೊತ್ತು, 6 ಕಾಲೇಜಿಗಳಿಗೆ ದಂಡಯಾತ್ರೆಗಳನ್ನು ಮಾಡಿ, 9 ಕಡೆ ಸಂದರ್ಶನಕ್ಕೆ ಹೋಗಿ ಕೊನೆಗೂ ನಿಮ್ಮ ಜೀವನದಲ್ಲಿ ಸುಮಾರು 12 ಕಡೆ ಕೆಲಸ ಬದಲಾಯಿಸಿದರೂ ಮನೆಯಲ್ಲಿ ಹಾಯಾಗಿರುತ್ತೀರಿ, ಅದಲ್ಲವೆ ಮುಖ್ಯ?

**ಮೀನಾ:** ಅ.ಸ.: (3,5,12) ನಿಮಗೆ ಗುರುಬಲ ಗಟ್ಟಿಯಾಗಿದೆ ಹಾಗಾಗಿ ಸಂಖ್ಯಾ ಬಲವೂ ಗಟ್ಟಿಯಾಗಿದೆ, ಅದನ್ನು ಉಪಯೋಗಿಸಿಕೊಳ್ಳಿ. ಉದಾಹರಣೆಗೆ ನೀವು ಏನು ಖರೀದಿಸಿದರೂ ನಿಮ್ಮ ಅ.ಸ.ಗಳನ್ನು ಮರೆಯದಿರಿ. (3 ಪ್ಲೇಟು ದೋಸೆ, 5 ಜೊತೆ ಸೀರೆ ಬ್ಲೌಸ್, 12 ಬಾಳೇ ಹಣ್ಣುಗಳು – ಹೀಗೆ) ಆಹಾರ ಸೇವೆಯಲ್ಲಿ ನಿಮ್ಮ ಜೀವನದಲ್ಲಿ ಶಾಂತಿ ದೊರಕುತ್ತದೆ. ಆದರೆ ನಿಮ್ಮ ತೂಕದ ಏರಿಕೆ 3 ಅಥವಾ 5 ಅಥವಾ 12 ಕೆಜಿಗಳಿಗೆ ಸೀಮಿತವಾಗಿರಲಿ ಇಲ್ಲದಿದ್ದರೆ ......

ಓದುಗರಿಗೆಲ್ಲಾ ನವರಾತ್ರಿಯ ಶುಭಾಶಯಗಳು. ತಾಯಿ ಚಾಮುಂಡೇಶ್ವರಿಯ ಅನುಗ್ರಹ ನಿಮ್ಮೆಲ್ಲರ ಮೇಲಿರಲಿ! ✻